**ಬ್ರಾನ್‌ಫೆನ್ ಬ್ರೆನ್ನರ್‌ರ ಸಿದ್ಧಾಂತ**

ಮಾನವರ ವಿಕಾಸಕ್ಕೆ ಸಂಬಂಧಿಸಿದಂತೆ ಬ್ರಾನ್‌ಫೆನ್ ಬ್ರೆನ್ನರ್‌ರ ಜೈವಿಕ ಪರಿಸರ ಸಿದ್ಧಾಂತದ ಉಪಯೋಗಗಳು ಮತ್ತು ಅನುಪಯೋಗಗಳು ( ಒಪ್ಪುಗಳು ಮತ್ತು ತಪ್ಪುಗಳು)

ಜೊನಾಥನ್ ಟಡ್ಜ್ , ಇರೀನಾ ಮಾಕ್ರೊವಾ , ಬ್ರಿಜೆಟ್ ಹ್ಯಾಟ್ ಫೀಲ್ಡ್ ಮತ್ತು ರಚನಾ ಕಾರ್ಣಿಕ್.

ಗ್ರೀನ್ಸ್ ಬೋರೊದಲ್ಲಿರುವ ಉತ್ತರಕೆರೋಲಿನ ವಿಶ್ವ ವಿದ್ಯಾಲಯ.

**ಸಾರಾಂಶ**

1990 ರ ಮಧ್ಯ ಭಾಗ ಮತ್ತು ಅದರ ನಂತರದ ಬ್ರಾನ್‌ಫೆನ್ ಬ್ರೆನ್ನರ್‌ರ ಪಕ್ವಗೊಂಡ ಜೈವಿಕ ಪರಿಸರ ಸಿದ್ಧಾಂತವನ್ನು ನಾವು ಇಲ್ಲಿ ವಿವರಿಸುತ್ತೇವೆ, ಪ್ರಕ್ರಿಯೆ–ವ್ಯಕ್ತಿ–ಸಂದರ್ಭ–ಸಮಯದ ಮಾದರಿಯನ್ನು ಕೇಂದ್ರವಾಗಿಟ್ಟುಕೊಂಡು, ಅದರ ಹತ್ತಿರದ ಪ್ರಕ್ರಿಯೆಗಳನ್ನು ನಿರ್ದೇಶಿಸುವತ್ತ ಗಮನ ಹರಿಸುತ್ತೇವೆ. ನಾವು 2001 ರ ನಂತರದ 25 ಪ್ರಬಂಧಗಳನ್ನು ಪರೀಕ್ಷಿಸುತ್ತೇವೆ, ಇವೆಲ್ಲವು ಬ್ರಾನ್‌ಫಿನ್ ಬ್ರೆನ್ನರ್‌ರ ಸಿದ್ಧಾಂತವನ್ನು ನೇರವಾಗಿ ವಿವರಿಸುತ್ತವೆ, ಮತ್ತು ಅವುಗಳಲ್ಲಿ ನಾಲ್ಕು ಮಾತ್ರ ಸಿದ್ಧಾಂತದ ಹಳತಾದ ವಿಭಾಗಗಳನ್ನು ಅವಲಂಬಿಸಿವೆ, ಹಾಗೂ ಇವುಗಳಿಂದ ಸಾಕಷ್ಟು ಕಾಲ್ಪನಿಕ ಗೊಂದಲಗಳು ಮತ್ತು ಸಿದ್ಧಾಂತದ ಸರಿಯಾದ ಪರೀಕ್ಷೆ ಮಾಡಿಲ್ಲದಿರುವುದು ಕಂಡು ಬರುತ್ತದೆ.

ಮುಖ್ಯ ಪದಗಳು:–

ಜೈವಿಕ ಪರಿಸರ ಸಿದ್ದಾಂತ ಬ್ರಾನ್‌ಫಿನ್ ಬ್ರೆನ್ನರ್‌ರ ಪರಿಸರ ಸಿದ್ಧಾಂತ, ಪಿಪಿಸಿಟಿ, ಪ್ರಕ್ರಿಯೆ–ವ್ಯಕ್ತಿ–ಸಂದರ್ಭ–ಸಮಯದ ಮಾದರಿ, ಸಾಮೀಪ್ಯ ಪ್ರಕ್ರಿಯೆಗಳು ಮಾನವನ ವಿಕಾಸಕ್ಕೆ ಸಂಬಂಧಿಸಿದಂತೆ ಬ್ರಾನ್‌ಫಿನ್ ಬ್ರೆನ್ನರ್‌ರ ಜೈವಿಕ ಪರಿಸರ ಸಿದ್ಧಾಂತದ ಉಪಯೋಗಗಳು ಮತ್ತು ಅನುಪಯೋಗಗಳು ( ಒಪ್ಪುಗಳು ಮತ್ತು ತಪ್ಪುಗಳು)

ಹಲವಾರು ಪಂಡಿತರು (ಉದಾಹರಣೆಗೆ ಗೋಲ್ಡ್ ಹೇಬರ್ ,2000; ಗೂಬಾ ಮತ್ತು ಲಿಂಕನ್ 1994; ರಿಚರ್ಸ್ 1997;ಟಡ್ಜ್ 2008; ವಿನೆಗರ್ 1997) ಬಹಳ ಚೆನ್ನಾಗಿ ವಾದ ಮಾಡಿರುವಂತೆ ಒಬ್ಬರ ಸಿದ್ಧಾಂತಕ್ಕೆ ಮತ್ತು ಬಳಸುವ ವಿಧಾನಗಳಿಗೂ ಮತ್ತು ಅವರ ವಿಶ್ಲೇಷಣಾ ತಂತ್ರಗಳ ಮಧ್ಯೆ ಬಲವಾದ ಸಂಬಂಧವಿರಬೇಕು, ಯಾವುದೇ ವಿಜ್ಞಾನದ ಭಾಗದಲ್ಲೂ ಸಿದ್ಧಾಂತದ ಅರ್ಥವು ತೆಗೆದುಕೊಂಡ ವಿಷಯದಲ್ಲಿರುವ ಸಂಬಂಧಗಳನ್ನು ವಿವರಿಸುವ ಚೌಕಟ್ಟನ್ನು ಒದಗಿಸಿಕೊಡುತ್ತದೆ, ಅಲ್ಲದೆ ಹೊಸ ಸಂಬಂಧಗಳನ್ನು ಒದಗಿಸುವ ಒಳನೋಟಗಳನ್ನು ಹೊಂದಿಸಿಕೊಡುತ್ತದೆ, ಅಲ್ಲದೆ. ಸಿದ್ಧಾಂತವು ವಸ್ತು ಸ್ಥಿತಿಯನ್ನು ಪ್ರಕಟಗೊಳಿಸುತ್ತದೆಂದು ನಾವು ಅಂದುಕೊಳ್ಳಬಹುದಾದರೂ, ಅವುಗಳ ಉದ್ದೇಶಗಳಲ್ಲಿ ಹಲವು

ಸಾಮಾನ್ಯ ವೈಜ್ಞಾನಿಕ ವಾಕ್ಯಗಳು ಸಂಶೋಧಕರಿಗೆ ತಿಳಿಸಲ್ಪಡುತ್ತದೆ ಮತ್ತು ಪ್ರಯೋಗಗಳ ಮೂಲಕ ನಡೆಯುವ ಅಧ್ಯಯನಗಳನ್ನು ಮಾರ್ಗದರ್ಶನ ಮಾಡಲ್ಪಡುತ್ತವೆ, ಅವುಗಳ ಅಧ್ಯಯನಗಳ ನಿರ್ಣಯಗಳೆಲ್ಲವನ್ನೂ ಒಂದು ಸಾಮಾನ್ಯ ಮಾರ್ಗದರ್ಶಿ ಸೂತ್ರದಿಂದ ಮೌಲ್ಯಮಾಪನ ಮಾಡಬಹುದು. ಪ್ರಯೋಗವಾದೀ ಅಧ್ಯಯನಗಳ ಗುರಿಯಾವುದಾಗಿತ್ತೆಂದರೆ ಮಾಹಿತಿ ಸಂಗ್ರಹಣೆಯಲ್ಲದೆ ನಿಖರತೆಯನ್ನು ಪರೀಕ್ಷಿಸುವುದಲ್ಲದೆ, ಸಿದ್ಧಾಂತಗಳು ಸರಿಯಾಗಿ ಹೊಂದಿಕೊಳ್ಳುತ್ತದೆಯೋ ಎಂದು ಸಹನೋಡಬಹುದು ಹಾಗೂ ವಿಶೇಷ ಘಟನೆಯನ್ನು ವಿವರಿಸುವುದು ಸಹ ಅವುಗಳ ಗುರಿಯಾಗಿರುತ್ತದೆ. ಕೆಲವು ಸಂಶೋಧಕರು ವಾದಿಸುವಂತೆ ಅವರ ಕೆಲಸವು ವಿಶೇಷವಾಗಿ ಸಿದ್ಧಾಂತಕ್ಕೆ ಹೊಂದಿಕೊಳ್ಳುವುದಿಲ್ಲವೆಂದು ( ಅಸ್ತಿ ಭಾರದ ಸಿದ್ಧಾಂತವನ್ನು ಮುಂದುವರೆಸುವವರು) ಅಥವಾ ಶುದ್ಧವಾದ ಅನುಗಮನ ಪದ್ಧತಿಯೆಂದು ಹೇಳುತ್ತಾರೆ (ವಿವರಣಾತ್ಮಕ ಅಧ್ಯಯನಗಳು). ಕೆಲವು ಪ್ರಯೋಗವಾದೀ ಅಧ್ಯಯನಗಳು ಒಂದು ಸಿದ್ದಾಂತದ ಚೌಕಟ್ಟಿನಿಂದ ಮಾರ್ಗದರ್ಶಿಸಲ್ಪಡುತ್ತವೆ, ಆ ಮೂಲಕ ಸಂಶೋಧಕನು ಕೆಲಸ ಮಾಡುತ್ತಾನೆ, ಅದು ಪ್ರಜ್ಞಾ ಪೂರ್ವಕವಾಗಿರಬಹುದು ಅಥವಾ ಇಲ್ಲದಿರಬಹುದು. ಇದರ ಮುಂದಿನ ಹಂತದಲ್ಲಿ ವೈಜ್ಞಾನಿಕ ಯೋಚನೆಯ ಪರಿಶುದ್ಧತೆ ಮತ್ತು ಪ್ರಾಮಾಣಿಕತೆಯನ್ನುಳಿಸಲು, ಹಾಗೂ ನಿರ್ಣಯಗಳ ಸೂಕ್ತತೆಯನ್ನು ಸರಿಪಡಿಸಲು, ಇಲ್ಲಿನ ಸಿದ್ದಾಂತದ ಚೌಕಟ್ಟು ಯಾವುದು ಸಂಶೋಧನೆಯ ಆಧಾರ ಸ್ತಂಭವಾಗಿರುತ್ತದೆಯೋ ಅದರ ಹೊರ ತೆಗೆಯುವಿಕೆಯು ಮತ್ತು ಪ್ರಾಮುಖ್ಯತೆಯನ್ನು ಹೊರತರುವುದು ಮುಖ್ಯವಾಗುತ್ತದೆ.

ಯಾವುದೇ ಸಿದ್ಧಾಂತವನ್ನು ಸ್ಪುಟವಾಗಿ ವ್ಯಕ್ತಪಡಿಸಿದಾಗ ಆಗುವ ಒಂದು ಅನುಕೂಲತೆಯೆಂದರೆ, ಅಧ್ಯಯನ ನಡೆಸುವಾಗ ಅಥವಾ ವರದಿಮಾಡುವಾಗ ಸಿದ್ಧಾಂತವನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ, ಆಗ ಸಾಕ್ಷ್ಯವನ್ನು ಬೆಂಬಲಿಸುವುದರಿಂದ ಅಥವಾ ವಿರೋಧಿಸುವುದರಿಂದ ಅರ್ಥಮಾಡಿಕೊಳ್ಳಬಹುದು. ಅಲ್ಲದೆ, ಅಕಸ್ಮಾತ್ ಪ್ರಯೋಗವು ಸಿದ್ಧಾಂತವನ್ನು ಸರಿಯಾಗಿ ಬೆಂಬಲಿಸದಿದ್ದರೆ ಅದು ಎರಡು ಬಗೆಯಲ್ಲಿ ತೊಂದರೆಯನ್ನುಂಟುಮಾಡುತ್ತದೆ. ಒಂದು ಅದು ವಿದ್ಯಾರ್ಥಿಗಳು ಮತ್ತು ಸಹಾಯಕ ಸಂಶೋಧಕರನ್ನು ವಿಷಯ ಮತ್ತು ಕಲ್ಪನೆಗಳ ಬಗ್ಗೆ ತಪ್ಪು ಮಾಹಿತಿ ನೀಡಿ ಒಂದು ತಪ್ಪಾದ ಮಾರ್ಗದರ್ಶಿ ಸಾಧನವನ್ನು ಕೊಟ್ಟಂತಾಗುತ್ತದೆ. ಎರಡನೆಯದಾಗಿ ಸಿದ್ದಾಂತದ ಸರಿಯಾದ ಪರೀಕ್ಷೆ ಮಾಡುವುದಿಲ್ಲ, ಆದ್ದರಿಂದ ತಕ್ಕಂತಹ ಸೂಕ್ತವಾದ ಬದಲಾವಣೆಗಳನ್ನು ಮಾಡಲಾಗುವುದಿಲ್ಲ.

ಈ ಪ್ರಬಂಧದ ಮುಖ್ಯ ಉದ್ದೇಶವೆಂದರೆ ಯೂರೀ ಬ್ರಾನ್‌ಫೆನ್‌ಬ್ರೆನ್ನರ್‌ರ ಜೈವಿಕ ಪರಿಸರವಾದೀ ಸಿದ್ಧಾಂತವನ್ನು ಅದರ ಪರಿಪಕ್ವ ರೀತಿಯಲ್ಲಿ ತೋರಿಸಿ, ಮತ್ತು ಸಮಕಾಲೀನ ಕುಟುಂಬ ಮತ್ತು ವಿಕಾಸವಾದೀ ಸಂಶೋಧಕರು ಮಾಡುವ ಪ್ರಯೋಗದಲ್ಲಿನ ತಪ್ಪು ಒಪ್ಪುಗಳನ್ನು ಪರೀಕ್ಷಿಸಬಹುದು. ಮೊದಲು ಸಂಕ್ಷಿಪ್ತವಾದ ಪಕ್ಷಿನೋಟವನ್ನು ಸಿದ್ಧಾಂತದ ಮೂಲಗಳು ಮತ್ತು ಬೆಳವಣಿಗೆಗಳ ಬಗ್ಗೆ ಕೊಟ್ಟು ಅನಂತರ ಸಿದ್ಧಾಂತದ

ಮೂಲ ಅಂಶಗಳು ಮತ್ತು ಪ್ರಸ್ತಾಪಗಳ ಬಗ್ಗೆ ವಿವರವಾಗಿ ತಿಳಿಸುತ್ತೇವೆ. ಮುಂದೆ, 25 ಪ್ರಯೋಗಗಳ ಮಾದರಿಯೊಂದನ್ನು ಉಪಯೋಗಿಸಿಕೊಂಡು, ಅಂದರೆ ಅವೆಲ್ಲವು ಬ್ರಾನ್‌ಫೆನ್‌ಬ್ರೆನ್ನರ್‌ರ ಸಿದ್ಧಾಂತವನ್ನವಲಂಬಿಸಿರುವಂತಹವು, ಏಕೆಂದರೆ, ಸಿದ್ಧಾಂತವನ್ನು ಉಪಯೋಗಿಸಿರುವ ಸೂಕ್ತತೆಯನ್ನು ಪರೀಕ್ಷಿಸುವುದು ಮತ್ತು ಅನ್ವಯದ ಸೂಕ್ತತೆಯನ್ನು ಚರ್ಚಿಸುತ್ತೇವೆ. ಕೊನೆಯದಾಗಿ, ತಪ್ಪಾಗಿ ಅನ್ವಯವಾಗಿರುವ ಸನ್ನಿವೇಶಗಳನ್ನು ನಾವು ಗುರುತಿಸಿರುವುದಕ್ಕೆ ತಕ್ಕಂತಹ ವಿವರಣೆಗಳನ್ನು ಕೊಡಲು ಪ್ರಯತ್ನಿಸುತ್ತೇವೆ.

ನಮ್ಮ ಪ್ರಬಂಧದ ಮುಖ್ಯ ಉದ್ದೇಶವೆಂದರೆ, ಇತ್ತೀಚಿಗೆ ಪ್ರಕಟವಾಗಿರುವ ಬ್ರಾನ್‌ಫೆನ್‌ಬ್ರೆನ್ನರ್‌ರ

ಸಿದ್ಧಾಂತದ ಬಗೆಗಿನ ಸಂಶೋಧನಗೆಳ ಮೌಲ್ಯಮಾಪನ ಮಾಡುವುದು ನಮ್ಮ ಅನಿಸಿಕೆಯಂದರೆ, ಸಿದ್ಧಾಂತವನ್ನು ಯಾವ ರೀತಿಯಲ್ಲಿ ಸರಿಯಾಗಿ ಮತ್ತು ನಿಖರವಾಗಿ ನಿರೂಪಿಸಿದ್ದಾರೆ ಮತ್ತು ಸಂಶೋಧನಾ ವಿಧಾನಗಳನ್ನು ಅಥವಾ ವಿಶ್ಲೇಷಣೆಗಳನ್ನು ಸಿದ್ಧಾಂತಕ್ಕೆ ಸರಿಯಾಗಿ ಉಪಯೋಗಿಸಿಕೊಂಡಿದ್ದಾರೆ ಎಂದು ನೋಡುವುದು, ಮೊಟ್ಟ ಮೊದಲನೆಯದಾಗಿ ಸಿದ್ಧಾಂತವು ಪರಿಪಕ್ವ ರೀತಿಯಲ್ಲಿ ಬೆಳೆದು ಬಂದ ಬಗೆಯನ್ನು ವಿವರಿಸುತ್ತೇವೆ.

**ಬ್ರಾನ್‌ಫೆನ್‌ಬ್ರೆನ್ನರ್‌ರ ಸಿದ್ಧಾಂತದ ಒಂದು ಸಂಕ್ಷಿಪ್ತ ಪಕ್ಷಿ ನೋಟ**

ಮಾನವನ ವಿಕಾಸದ ಬಗೆಗಿನ ಬ್ರಾನ್‌ಫೆನ್‌ಬ್ರೆನ್ನರ್‌ರ ಸಿದ್ಧಾಂತವು ಅವರು 2005 ರಲ್ಲಿ ಸಾಯುವವರೆಗೂ, ಪೂರ್ಣವಾಗಿ ಬೆಳೆಯುತ್ತಲೆ ಇತ್ತು . ಈ ರೀತಿಯ ಎಲ್ಲ ಸಿದ್ದಾಂತಗಳ ಬಗ್ಗೆಯು ಸರಿಹೊಂದುತ್ತದೆ: ಯಾರೋ ಒಬ್ಬರು ಪಿಯಾಜೆರವರ ಸಿದ್ಧಾಂತವನ್ನು ವಿವರಿಸುವಾಗ ಅವರ ಮುಂಚಿನ ಕೆಲವು ಪುಸ್ತಕಗಳನ್ನು ತೆಗೆದುಕೊಂಡರೆ ಸಾಲದು. ಈ ಅಂಶವು ಕಳೆದ ಅರ್ಧ ಶತಮಾನದಲ್ಲಿ ವಿಕಾಸಹೊಂದಿದ ಸಿದ್ಧಾಂತಗಳಿಗೆ ಮಾತ್ರ ಹೊಂದುವುದಿಲ್ಲ. ಉದಾಹರಣೆಗೆ ವೈಗೊಟ್ಸ್ಕಿ ರವರು ಕನಿಷ್ಟ ಪಕ್ಷ ಒಂದು ದಶಮಾನದ ಕಾಲ ಮನಃ ಶಾಸ್ತ್ರದ ಬಗ್ಗೆ ಕೆಲಸ ಮಾಡುತ್ತಿದ್ದರು, ಆದರೆ ಇಲ್ಲಿ ಮೂರು ಮುಖ್ಯವಾದ ಭಾಗಗಳನ್ನು ಗುರುತಿಸಬಹುದು ಮತ್ತು ಅವರ ಸಿದ್ಧಾಂತವನ್ನು ವಿವರಿಸುವಾಗ ಸಂಶೋಧಕರು ಆ ಮೂರು ಭಾಗಗಳಲ್ಲಿ ವ್ಯತ್ಯಾಸಗಳನ್ನು ಗುರುತಿಸಬೇಕು. (ಟಡ್ಜ್ ಮತ್ತು ಸ್ಕಿಮ್‌ಶರ್, 2003) . ಬ್ರಾನ್‌ಫೆನ್‌ಬ್ರೆನ್ನರ್‌ರು ಒಬ್ಬ ಸ್ವಕೇಂದ್ರಿತ, ಸ್ವ ಪ್ರತಿಫಲಿತ ಸಿದ್ಧಾಂತಿಯಾಗಿದ್ದರು ಮತ್ತು ಅವರು ತಮ್ಮ ಸಿದ್ದಾಂತವು ಆಗಾಗ್ಗೆ ಬದಲಾಗುತ್ತಿರುವುದನ್ನು ಕಂಡು ಕೊಂಡಿದ್ದರು. ಉದಾಹರಣೆಗೆ ಆತ ಹೀಗೆ ಬರೆದುದುಂಟು. " ನಾನೊಂದು ಗುಪ್ತ ಉದ್ದೇಶವಿಟ್ಟುಕೊಂಡು ಕೆಲಸ ಮಾಡಿದ್ದೇನೆಂದು ಅನ್ನಿಸುತ್ತಿದೆ: ಅದರಲ್ಲಿ ಮರು ಅಳತೆ ಮಾಡಿರುವ, ಪರಿಷ್ಕರಿಸುವ , ಮತ್ತು ಮುಂದುವರೆಸಿರುವ, ಹಾಗೂ ತಪ್ಪೊಪ್ಪಿಕೊಂಡಿರುವ ಮತ್ತು ಬಿಟ್ಟುಬಿಟ್ಟಿರುವ ಕೆಲಸಗಳನ್ನು ಮಾಡಿದ್ದೇನೆನ್ನಿಸುತ್ತದೆ ಅದು 1879 ರ ಪ್ರಬಂಧದ ಕಲ್ಪನೆಗಳ ಬಗ್ಗೆ ಮಾತ್ರ.

(ಬ್ರಾನ್‌ಫೆನ್‌ಬ್ರೆನ್ನರ್ 1989 , ಪುಟ 187) . ಆತ 1999ರ ಪ್ರಬಂದದ ಅಧ್ಯಾಯದಲ್ಲಿ ಮರು ಅಳತೆ ಮಾಡಿರುವ ಬಗ್ಗೆ ವಿಶೇಷ ಆಸಕ್ತಿಯಿಂದ ತಿಳಿಸಿದ್ದಾರೆ, ಅಲ್ಲಿ ಆತ ಹೇಳುವಂತೆ ಎರಡು ಕಾಲಗಳ ಬಗೆಗೆ ವ್ಯತ್ಯಾಸಿಸುವುದು ಮುಖ್ಯವೆನ್ನಿಸುತ್ತದೆ. ಮೊದಲನೆಯದು ಮಾನವನ ವಿಕಾಸದ ಪರಿಸರ ಶಾಸ್ತ್ರದಿಂದ ಕೊನೆಯಾಗುತ್ತದೆ. (ಬ್ರಾನ್‌ಫೆನ್‌ಬ್ರೆನ್ನರ್‌ರ 1979) ಮತ್ತು ಎರಡನೆಯದು ಹಲವು ಪ್ರಬಂಧಗಳಿಂದ ತೆಗೆದಿರುವುದು ಅವರ ಮೂಲ ಮಾದರಿ ಎಂದೆನಿಸುತ್ತದೆ ( ಪು.4) ಅವರ ಮುಂಚಿನ ಸಿದ್ಧಾಂತೀಕರಣವು ಸಂಧರ್ಭಕ್ಕೆ ಬಹಳ ಗರ್ವದ ಸ್ಥಾನವನ್ನಿತ್ತಿತ್ತು ಎಂದೆನಿಸುತ್ತದೆ ( ವಿಶೇಷ ಕಲ್ಪನೆಗಳಾದ ಸೂಕ್ಷ್ಮ ವ್ಯವಸ್ಥೆ , ನಡುವಿನ ವ್ಯವಸ್ಥೆ ಹೊರಗಣ ವ್ಯವಸ್ಥೆ ದೊಡ್ಡ ವ್ಯವಸ್ಥೆ) ಅಲ್ಲದೆ ಮುಂದೆ ಆತ ಸ್ವ ವಿಮರ್ಶೆ ಸಹ ಮಾಡಿಕೊಂಡರು ತನ್ನ ಬೆಳವಣಿಗೆಯಲ್ಲಿ ವ್ಯಕ್ತಿ ತನ್ನ ಪಾಲು ಕಡಿಮೆ ಮಾಡಿಕೊಳ್ಳುವುದನ್ನು ಮತ್ತು ಸಂದರ್ಭದ ಮೆಲೆ ಹೆಚ್ಚು ಕೇಂದ್ರೀಕರಿಸುವುದನ್ನು ತಿಳಿಸಿದರು (ಬ್ರಾನ್‌ಫೆನ್‌ಬ್ರೆನ್ನರ್ 1989). ಆಸಕ್ತಿಕರ ಕಲ್ಪನೆಗಳಾದ ಮುಖ್ಯ ಚಟುವಟಿಕೆಗಳು, ಪರಿಸರದ ಪ್ರಯೋಗಗಳು , ಪರಿಸರದ ಸಮಂಜಸತೆ, ಮತ್ತು ಪರಿಸರದ ಬದಲಾವಣೆಗಳು, ಇವುಗಳನ್ನು ತಮ್ಮ ಮುಂಚಿನ ಕೆಲಸದಲ್ಲಿ ಪ್ರಾಮುಖ್ಯತೆ ಕೊಟ್ಟಿದ್ದರು (ಬ್ರಾನ್‌ಫೆನ್‌ಬ್ರೆನ್ನರ್ 1977 ,1979) ಆ ನಂತರದ ಬರವಣಿಗೆಗಳಲ್ಲಿ ಮಾಯವಾಯಿತು.

ಬ್ರಾನ್‌ಫೆನ್‌ಬ್ರೆನ್ನರ್ (1989,1999) ವಾದಿಸುವಂತೆ 1977 ಮತ್ತು 1979 ರ ಸಿದ್ಧಾಂತದ ಭಾಗಗಳನ್ನು ಬದಲಾಯಿಸಿರಬಹುದು, ತಿದ್ದಿರಬಹುದು ಮತ್ತು ಲಂಬಿಸಿರಬಹುದು, ಆದರೆ ತಮ್ಮ ಸಿದ್ಧಾಂತವು ಯಾವಾಗಲೂ ಪರಿಸರಕೇಂದ್ರಿತವಾಗಿಯೇ ಇದ್ದು ವ್ಯಕ್ತಿ. ಸಂದರ್ಭಗಳ ಪರಸ್ಪರ ಹೊಂದಾಣಿಕೆಯನ್ನು ಲಂಬಿಸುತ್ತದೆ. ( ಟಡ್ಜ್ , ಗ್ರೇ ಮತ್ತು ಹೋಗನ್ 1997) ತಮ್ಮ ಮುಂಚಿನ ಯಾವುದೇ ಬರವಣಿಗೆಯಲ್ಲೂ ಸಿದ್ದಾಂತಕ್ಕೆ ಸಂಬಂಧಿಸಿದಂತೆ ಬರೆದದ್ದು ಅವರು ಸಂದರ್ಭವೊಂದನ್ನೆ ಕೇಂದ್ರೀಕರಿಸಿ ಬರೆದಿಲ್ಲ. ಅವರ ಮುಂಚಿನ ಬರಹಗಳಿಗೂ ಹಾಗೂ ನಂತರದ ಬರಹಗಳಿಗೂ ಇರುವ ಮುಖ್ಯವಾದ ವ್ಯತ್ಯಾಸವೆಂದರೆ, ಮಾನವನ ಬೆಳವಣಿಗೆಯಲ್ಲಿ ಪ್ರಕ್ರಿಯೆಗಳ ಪ್ರಭಾವವಾಗಿತ್ತು. 1980 ರಲ್ಲಿ ಬರೆದ ಪ್ರಬಂಧಗಳಲ್ಲಿ ಅಥವಾ ಅಧ್ಯಾಯಗಳಲ್ಲಿ ( ಬ್ರಾನ್‌ಫೆನ್‌ಬ್ರೆನ್ನರ್ 1988: ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಕ್ರೌಟರ್ 1983) ಅವರು ಸಂದರ್ಭದ ಸನ್ನಿವೇಶಗಳಿಗೂ ಹಾಗೂ ಪ್ರಕ್ರಿಯೆಗಳಿಗೂ ಇರುವ ಸಂಬಂಧವನ್ನು ತೋರಿಸಿದ್ದರು ( ಸಂಸ್ಕೃತಿ ಅಥವಾ ಸಾಮಾಜಿಕ ವರ್ಗ ಇರಬಹುದು) ಅಥವಾ ವ್ಯಕ್ತಿಯ ಒಂದು ಭಾಗ (ಲಿಂಗ) ಮತ್ತು ಆಸಕ್ತಿಯ ಫಲವಿರಬಹುದು. 1990 ರಲ್ಲಿ ಅವರು ಬೆಳವಣಿಗೆಯಲ್ಲಿ ಸಾಮೀಪ್ಯ ಪ್ರಕ್ರಿಯೆಗಳನ್ನು ಮುಖ್ಯವಾದ ಅಂಶಗಳಾಗಿ ತಿಳಿಸಿದರು. (ಬ್ರಾನ್‌ಫೆನ್‌ಬ್ರೆನ್ನರ್ , 1994 1995,1999 : ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಪೇಸಿ 1994: ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998) ಆ ನಂತರವೇ ಅಂದರೆ ಈ ಸಮಯದ ನಂತರವೇ ಅವರು ಪ್ರಕ್ರಿಯೆ–ವ್ಯಕ್ತಿ–ಸಂಧರ್ಭ–ಸಮಯಗಳ ಮಾದರಿಯನ್ನು (ಪಿಪಿಸಿಟಿ ಚಿಕ್ಕದಾಗಿ ಹೇಳಬಹುದು)

ಚರ್ಚಿಸಿದ್ದಾರೆ, ಮತ್ತು ಇದೇ ಅವರ ಸಿದ್ಧಾಂತದ ಮುಖ್ಯಭಾಗವೆನಿಸಿದೆ (ಬ್ರಾನ್‌ಫೆನ್‌ಬ್ರೆನ್ನರ್ 2005: ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಇವಾನ್ಸ್ 2000, ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 2006).

ಪಂಡಿತರು ಅವರ ಸಿದ್ಧಾಂತದ ಮುಂಚಿನ ಅವತರಣಿಕೆಗಳನ್ನು ತಮ್ಮ ಸಂಶೋಧನೆಯ ಆಧಾರವಾಗಿಟ್ಟುಕೊಂಡಿರಬಹುದು, ಹಾಗೂ ಅವರು ತಮ್ಮ ಅಧ್ಯಯನಕ್ಕೆ ನಂತರದ ಅವತರಣಿಕೆಯ ಕೆಲವು ಮುಖ್ಯವಾದ ಕಲ್ಪನೆಗಳನ್ನು ಉಪಯೋಗಿಸಿಕೊಂಡಿರಬಹುದು. ಯಾವುದರಲ್ಲಾದರೂ ವಿಷಯವನ್ನು ಸ್ಫುಟವಾಗಿ ತಿಳಿಸಿರಬೇಕು: ಕ್ಷೇತ್ರವಾಗಲೀ ಅಥವಾ ಸಿದ್ಧಾಂತವಾಗಲೀ ಎರಡಕ್ಕೂ ಅನ್ಯಾಯ ಮಾಡಿದಂತಾಗುತ್ತದೆ . ಆಕಸ್ಮಾತ್ ಪಂಡಿತರು ಬ್ರಾನ್‌ಫೆನ್‌ಬ್ರೆನ್ನರ್‌ರ ಪರಿಸರವಾದೀ ಸಿದ್ಧಾಂತ ಅಥವಾ ಬ್ರಾನ್‌ಫೆನ್‌ಬ್ರೆನ್ನರ್ ರ ಜೈವಿಕ ಪರಿಸರವಾದೀ ಸಿದ್ಧಾಂತ ಎಂದು ಹೇಳಿಬಿಟ್ಟು ಮುಂಚಿನ ಅವತರಣಿಕೆ ಅಥವಾ ಸಿದ್ಧಾಂತದ ಭಾಗಶಃ ಭಾಗವೆಂದು ತಿಳಿಸದಿದ್ದರೆ ತಪ್ಪಾಗುತ್ತದೆ. ಈ ಶತಮಾನದ ಮೊದಲ ದಶಕದಲ್ಲಿ ಬರೆದಂತಹ ಬರಹಗಳಲ್ಲಿ ಸುಮ್ಮನೆ ಬ್ರಾನ್‌ಫೆನ್‌ಬ್ರೆನ್ನರ್‌ರ ಸಿದ್ಧಾಂತವೆಂದು ಹೇಳಿದರೆ ಕಾಲ್ಪನಿಕ ಅಸಂಗತೆ ಉಂಟಾಗುತ್ತದೆ, ಇಲ್ಲಿ ಕೆಲವರು 1970 ಅಥವಾ 1980ರ ವಿಭಾಗಗಳನ್ನು ತೆಗೆದುಕೊಂಡರೆ ಕೆಲವರು 1990ರಲ್ಲಿನ ವಿಚಾರಗಳನ್ನು ಉಪಯೋಗಿಸಿಕೊಂಡಿರುತ್ತಾರೆ. ಪೂರ್ಣ ಸಿದ್ಧಾಂತವು ತಮ್ಮ ಬೆಳವಣಿಗೆಯಾದ ನಂತರದ್ದು ನಾಲ್ಕು ಅಂಶಗಳಾದ ಪಿಪಿಸಿಟಿ ಕಲ್ಪನೆಗಳ ಅಂತರ ಸಂಬಂಧಗಳಾಗಿರುತ್ತದೆ. 1. ಪ್ರಕ್ರಿಯೆ:– ಈ ನಾಲ್ಕರಲ್ಲಿ ಈ ಮೊದಲನೆಯ ಕಲ್ಪನೆಯು ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ (ಪ್ರಾಥಮಿಕ ತಂತ್ರಗಳು). ಸಾಮೀಪ್ಯ ಪ್ರಕ್ರಿಯೆಗಳು ಎರಡು ಮುಖ್ಯವಾದ ಆಧಾರ ಹೇಳಿಕೆಗಳಲ್ಲಿ ಬರುವಂಥಹದ್ದು, ಬ್ರಾನ್‌ಫೆನ್‌ಬ್ರೆನ್ನರ್‌ರ ಮುಂದಿನ ಪ್ರಕಟಣೆಗಳಲ್ಲೂ ಕಾಣಿಸಿಕೊಳ್ಳುತ್ತವೆ. ಮೊದಲನೆಯದು ಸೂಚಿಸುವಂತೆ-------- ಮಾನವನ ವಿಕಾಸವು ಬಹಳ ಸಂಕೀರ್ಣ ಹಾಗೂ ವಿರೋಧಾತ್ಮಕ ಅಂತರ್ ಕ್ರಿಯೆಗಳಿಂದ ಪ್ರಗತಿ ಹೊಂದಿ ಚತುರನಾದ ವ್ಯಕ್ತಿ ಮತ್ತು ಜೈವಿಕ ಪರಿಸರದಿಂದ ಉಂಟಾಗುವ ಘರ್ಷಣೆಯಿಂದ ಬರುವ ಮಾನವ ಶಿಶು ಮತ್ತು ವ್ಯಕ್ತಿಗಳು, ವಸ್ತುಗಳು ಮತ್ತು ಸಂಕೇತಗಳು ತತ್‌ಕ್ಷಣದ ಪರಿಸರದಲ್ಲಿ ಇರವಂತಹವು ಪ್ರಭಾವ ಬೀರುತ್ತವೆ. ಇದು ಪರಿಣಾಮಕಾರಿಯಾಗಿ ಆಗಬೇಕಾದರೆ,. ಅಂತರ್ ಕ್ರಿಯೆಯ ಆಗಾಗ್ಗೆ ನಡೆದು ಗೊತ್ತಾದ ಹಂತಗಳಲ್ಲಿ ಸಾಕಷ್ಟು ಸಮಯ ನಡೆಯಬೇಕು. ಅಂತಹ ತತ್‌ಕ್ಷಣದ ಪರಿಸರದಲ್ಲಿ ಸಾಕಷ್ಟು ಸಮಯ ನಡೆಯುವ ಅಂತರ್ ಕ್ರಿಯೆಗಳನ್ನು ಸಾಮೀಪ್ಯ ಪ್ರಕ್ರಿಯೆಗಳು ಎನ್ನುತ್ತೇವೆ. (ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998 ಪು 996 ಕೆಳಗೆಯಿರುವುದು).

ಆತಕೊಟ್ಟ ಉದಾಹರಣೆಗಳು ( ಚಿಕ್ಕ ಶಿಶುವಿನೊಂದಿಗೆ ಆಟ, ಶಿಶು–ಶಿಶುಗಳ ಚಟುವಟಿಕೆಗಳು ಗುಂಪಿನಲ್ಲಿ ಅಥವಾ ಒಬ್ಬಂಟಿಯಾಗಿ ಆಡುವ ಆಟ , ಓದುವುದು, ಹೊಸ ಕೌಶಲಗಳನ್ನು ಕಲಿಯುವುದು ಇತ್ಯಾದಿ) ಬೆಳೆಯುವ ಮಕ್ಕಳ ಜೀವನದಲ್ಲಿ ಆಗಾಗ್ಗೆ ಆಗುತ್ತಿರುತ್ತವೆ. ಇಂತಹ ಚಟುವಟಿಕೆಗಳು ಬೆಳವಣಿಗೆಯ

ಯಂತ್ರಗಳಂತೆ ಕಂಡು ಬರುತ್ತವೆ ಹಾಗೂ ಅಂತಹ ಅಂತರ್ ಕ್ರಿಯೆಗಳಿಂದ ಮಕ್ಕಳು ಸುತ್ತಲ ಪ್ರಪಂಚವನ್ನು ಅರ್ಥ ಮಾಡಿಕೊಳ್ಳುತ್ತಾರೆ, ಅಲ್ಲಿ ತಮ್ಮ ಪಾತ್ರವೇನೆಂದು ತಿಳಿದುಕೊಳ್ಳುತ್ತಾರೆ, ಹಾಗೂ ಇಬ್ಬರು ಈಗಿರುವ ಸನ್ನಿವೇಶವನ್ನು ಬದಲಿಸುವುದರಲ್ಲಿ ಮತ್ತು ಅದರಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳುವುದರಲ್ಲಿ ನಿರತರಾಗುತ್ತಾರೆ.

ಬ್ರಾನ್‌ಫೆನ್‌ಬ್ರೆನ್ನರ್‌ರವರು ವಿಶೇಷವಾಗಿ ವ್ಯಕ್ತ ಪರಿಸಿರುವಂತೆ ಅವರನ್ನು ಅವರ 1979 ರ ಪುಸ್ತಕವನ್ನವಲಂಬಿಸಿ ಸಾಂದರ್ಭಿಕ ಸಿದ್ಧಾಂತಿ ಎಂದು ಕರೆಯಲಾಗುತ್ತಿತ್ತು. ಆದರೆ ಸಾಮೀಪ್ಯ ಪ್ರಕ್ರಿಯೆಗಳು ಅವರ ಸಿದ್ಧಾಂತದ ಅಡಿಪಾಯವಾಗಿತ್ತು. ಅಲ್ಲದೆ ಸಾಮೀಪ್ಯ ಪ್ರಕ್ರಿಯೆಗಳ ಸ್ವಭಾವವು ಮನುಷ್ಯ ಮತ್ತು ಸಂದರ್ಭಗಳಿಗನುಗುಣವಾಗಿ ಬದಲಾಗುತ್ತಿರುತ್ತದೆ ಲೌಕಿಕವಾಗಿ ಮತ್ತು ಅವಕಾಶಗಳಿಗೆ ಸಂಬಂಧ ಪಟ್ಟಂತ (ಬ್ರಾನ್‌ಫೆನ್‌ಬ್ರೆನ್ನರ್‌ರ 1995,1999,2001/2005, ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಇವಾನ್ಸ್ 2000, ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998). ಆತ ಮುಂದೆ ವಿವರಿಸಿರುವಂತೆ ಎರಡು ಮುಖ್ಯವಾದ ಅಂಶಗಳಲ್ಲಿ ಎರಡನೆಯದು ಹೀಗಿದೆ.

ರೂಪ ವಿಷಯ ಮತ್ತು ದಿಕ್ಕು ಸಾಮೀಪ್ಯ ಪ್ರಕ್ರಿಯೆಗಳ ಮುಖ್ಯಭಾಗಗಳಾಗಿದ್ದು ಬೆಳೆಯುವ ವ್ಯಕ್ತಿಯಲ್ಲಿ ಕಾಣಿಸಿಕೊಳ್ಳುವ ಜಂಟಿ ಕಾರ್ಯವಾಗುತ್ತದೆ ಮತ್ತೆ ಅದು ಸಮರ್ಪಕವಾಗಿ ಬದಲಾಗುತ್ತಿರುತ್ತದೆ, ತತ್‌ಕ್ಷಣದ ಮತ್ತು ದೂರವಿರುವ ಪರಿಸರದಲ್ಲಿ ಸಹ ಪ್ರಕ್ರಿಯೆಗಳು ನಡೆಯುವಲ್ಲಿ ಬದಲಾವಣೆ ಹೊಂದುತ್ತಿರುತ್ತದೆ. ಬೆಳವಣಿಗೆಯ ಫಲಗಳ ಸ್ವಭಾವ ಯಾವುದನ್ನು ನಾವು ಪರಿಗಣಿಸಿದ್ದೇವೆಯೋ, ಅವು ಮತ್ತು ಸಮಾಜದ ಚಲನೆ ಮತ್ತು ಕಾಲದಲ್ಲಿ ಅಗುವ ಬದಲಾವಣೆಗಳು ಜೀವನ ಪದ್ಧತಿಗಳು ಮತ್ತು ಚಾರಿತ್ರಿಕ ಘಟ್ಟದಲ್ಲಿ ಮಾನವ ವಾಸಿಸುವ ಪರಿಸರಕ್ಕೆ ತಕ್ಕಂತೆ  ಬದಲಾವಣೆಯಾಗುತ್ತಿರುತ್ತದೆ. (ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998, ಪುಟ 996 ಮೂಲದಲ್ಲಿದ್ದಂತೆ)

ಬ್ರಾನ್‌ಫೆನ್‌ಬ್ರೆನ್ನರ್‌ರು ಹೇಳುವಂತೆ ಈ ಎರಡು ಅಂಶಗಳು ಸೈದ್ಧಾಂತಿಕವಾಗಿ ಪರಸ್ಪರ ಬೇರೆಯಾದವು ಮತ್ತು ಪ್ರಯೋಗಕ್ಕೆ ಒಳಪಡುವಂತಹವು. ಒಳ್ಳೆಯ ಕ್ರಿಯಾ ಬದ್ಧವಾದ ಸಂಶೋಧನಾ ವಿನ್ಯಾಸವು ಒಂದೇ ಬಾರಿಗೆ ಪರೀಕ್ಷೆ ನಡೆಸಬಲ್ಲದು, ಅದನ್ನು ಪ್ರಕ್ರಿಯೆ–ವ್ಯಕ್ತಿ–ಸಂದರ್ಭ–ಸಮಯದ ಮಾದರಿ ಎಂದು ಕರೆಯಲಾಗುತ್ತದೆ (ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998 , ಪುಟ 996) ಅಂತೆಯೇ ಜೈವಿಕ ಪರಿಸರದ ಸಿದ್ಧಾಂತಕ್ಕೆ ಸಂಬಂಧಿಸಿದ ಅಧ್ಯಯನವೊಂದರಲ್ಲಿ ಈ ಮಾದರಿಯ ನಾಲ್ಕೂ ಮುಖ್ಯಾಂಶಗಳಿರಬೇಕು. ಆಕಸ್ಮಾತ್ ಸಂಶೋಧನಾ ವಿನ್ಯಾಸವೊಂದರಲ್ಲಿ ಯಾವುದೇ ಕಾರಣಕ್ಕಾದರೂ ಯಾವುದಾದರೊಂದು ಮುಖ್ಯಾಂಶವನ್ನು ಸರಿಯಾಗಿ ಪರೀಕ್ಷಿಸಲಾಗದಿದ್ದಲ್ಲಿ ಅದನ್ನು ಸಿದ್ಧಾಂತದ ಸಮಗ್ರತೆಯನ್ನುಳಿಸಲು ಒಪ್ಪಿಕೊಂಡು ಬಿಡಬೇಕು.

**ವ್ಯಕ್ತಿ:**

ಬ್ರಾನ್‌ಫೆನ್‌ಬ್ರೆನ್ನರ್‌ರು ಜೈವಿಕ ಮತ್ತು ಅನುವಂಶೀಯ ಅಂಶಗಳು ವ್ಯಕ್ತಿಯನ್ನು ಪ್ರಭಾವಗೊಳಿಸುವುದನ್ನು ಒಪ್ಪಿಕೊಳ್ಳುತ್ತಾರೆ (ಬ್ರಾನ್‌ಫೆನ್‌ಬ್ರೆನ್ನರ್ 2001/2005: ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಸೆಸಿ, 1994) ಆದರೆ ಆತ ವ್ಯಕ್ತಿಯು ಸಾಮಾಜಿಕ ಸನ್ನಿವೇಶಕ್ಕೆ ತನ್ನ ಸ್ವಂತ ಲಕ್ಷಣಗಳನ್ನು ತರುವುದಕ್ಕೆ ಹೆಚ್ಚು ಗಮನ ಹರಿಸಿದ್ದಾರೆನ್ನಿಸುತ್ತದೆ (ಬ್ರಾನ್‌ಫೆನ್‌ಬ್ರೆನ್ನರ್ 1993, 1995: ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998). ಆತ ಈ ಲಕ್ಷಣಗಳನ್ನು ಮೂರು ಭಾಗಗಳಾಗಿ ವಿಂಗಡಿಸಿದರು ಹಕ್ಕೊತ್ತಾಯ, ಆಕರ ಮತ್ತು ಬಲ ಎಂದು. ಹಕ್ಕೊತ್ತಾಯದ ಲಕ್ಷಣಗಳು ಯಾವುವೆಂದರೆ ಆತ ಮುಂಚೆ ಕಾಣಿಸಿದ ವ್ಯಕ್ತಿಯ ಉತ್ತೇಜಕ ಲಕ್ಷಣಗಳಾಗಿದ್ದವು ಅಲ್ಲದೆ, ಅವು ತತ್‌ಕ್ಷಣದಲ್ಲಿ ಸಿಗುವ ಇನ್ನೊಬ್ಬ ವ್ಯಕ್ತಿಯ ವಯಸ್ಸು ಲಿಂಗ, ಚರ್ಮದ ಬಣ್ಣ ಮತ್ತು ಭೌತಿಕ ತೋರುವಿಕೆ ಇತ್ಯಾದಿ. ಈ ಬಗೆಯ ಲಕ್ಷಣಗಳು ವ್ಯಕ್ತಿಯನ್ನು ಭೇಟಿ ಮಾಡಿದ ತಕ್ಷಣವೇ ಉಂಟಾಗುವ ಅಂತಕ್ರಿಯೆಗಳನ್ನು ಪ್ರಭಾವಗೊಳಿಸುತ್ತವೆ. ಆಕರ ಮೂಲಗಳು ಹಕ್ಕೊತ್ತಾಯಗಳಿಂದ ಬೇರೆ ಯಾಗಿರುತ್ತವೆ, ತಕ್ಷಣದಲ್ಲಿ ಪ್ರಬಾವಗೊಳಿಸುವುದಿಲ್ಲ ಆದರೆ ಪ್ರೇರೇಪಿಸಿರಬಹುದು ನಿಖರತೆಯಲ್ಲಿ ವ್ಯತ್ಯಾಸಗಳಾಗಿರುತ್ತವೆ ಮತ್ತು ಹಕ್ಕೊತ್ತಾಯಗಳಿಂದ ಬೇರೆಯಾಗಿ ಕಾಣಿಸುತ್ತವೆ. ಈ ಲಕ್ಷಣಗಳು ಮನುಷ್ಯನ ಮಾನಸಿಕ ಮತ್ತು ಸಂವೇದನಾತ್ಮಕ ಸಾಮರ್ಥ್ಯಗಳಿಗೆ ಸಂಬಂಧಿಸಿರಬಹುದು. ಅವರ ಹಿಂದಿನ ಅನುಭವಗಳು, ಕೌಶಲಗಳು ಮತ್ತು ಬುದ್ದಿ ಶಕ್ತಿ ಇತ್ಯಾದಿ, ಅಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಮೂಲಗಳಿರಬಹುದು ( ಸಿಗುವ ಒಳ್ಳೆಯ ಆಹಾರ, ಮನೆ, ಚೆನ್ನಾಗಿ ನೋಡಿಕೊಳ್ಳುವ ತಂದೆ ತಾಯಿಯರು, ಸಾಮಾಜಿಕ ಸ್ಥಿತಿಗೆ ಹೊಂದುವ ಶೈಕ್ಷಣಿಕ ಅವಕಾಶಗಳು ಇತ್ಯಾದಿ) ಕೊನೆಯದಾಗಿ ಬಲಾಂಶವು ಅಂದರೆ ಅದರ ಲಕ್ಷಣಗಳು ಯಾವುವೆಂದರೆ ಅವು ವ್ಯಕ್ತಿ ವ್ಯಕ್ತಿಗಳ ಮಧ್ಯೆಯಿರುವ ವ್ಯತ್ಯಾಸಗಳು ಪ್ರೇರಣೆ , ಛಲ , ಸ್ವಭಾವ ಇತ್ಯಾದಿಗಳು. ಬ್ರಾನ್‌ಫೆನ್‌ಬ್ರೆನ್ನರ್ ಪ್ರಕಾರ ಎರಡು ಮಕ್ಕಳು ಒಂದೇ ಬಗೆಯ ಆಕರ ಲಕ್ಷಣಗಳಿದ್ದರು ಅವರ ಬದುಕಿನ ಜಾಡುಗಳು ಬೇರೆ ಬೇರೆಯಾಗಿರುತ್ತವೆ, ಒಬ್ಬ ಮುಂದುವರೆಯಲು ಪ್ರೇರಿತನಾಗಿರುತ್ತಾನೆ ಹಾಗೂ ಕೆಲಸಗಳಲ್ಲಿ ಛಲದಿಂದ ಮುಂದುವರೆಯುತ್ತಾನೆ ಆದರೆ ಇನ್ನೊಬ್ಬ ಪ್ರೇರಿತನಾಗಿಲ್ಲ ಮತ್ತು ಛಲದಿಂದ ಮುಂದುವರಿಯಲಾರ.

ಬ್ರಾನ್‌ಫೆನ್‌ಬ್ರೆನ್ನರ್‌ರು ತಮ್ಮ ಮುಂಚಿನ ಪ್ರಬಂಧಗಳಲ್ಲಿ ಬೆಳವಣಿಗೆಯ ಸಾಂದರ್ಭಿಕ ವಿಷಯಗಳಲ್ಲು ಸಿದ್ಧಾಂತ ರೂಪದಲ್ಲಿ ಮುಂದೊತ್ತಲಿಲ್ಲವೆಂದು ಕೆಲವು ಬರಹಗಾರರು ಭಾವಿಸುತ್ತಾರೆ, ಆದರೆ ಬ್ರಾನ್‌ಫೆನ್‌ಬ್ರೆನ್ನರ್‌ರು ತಮ್ಮ ಮುಂದಿನ ಬರವಣಿಗೆಗಳಲ್ಲಿ ವ್ಯಕ್ತಿಯ ಪಾತ್ರ ಹಾಗೂ ಸಂದರ್ಭದ ಬದಲಾವಣೆಗಳ ಬಗ್ಗೆ ವಿಷದೀಕರಿಸಿದರು. ಬದಲಾವಣೆಯು ಸಾಪೇಕ್ಷವಾಗಿ ನಿಷ್ಕ್ರಿಯವಾಗಿರಬಹುದು (ವ್ಯಕ್ತಿಯೊಬ್ಬ ವಾತಾವರಣದಲ್ಲಿ ಇದ್ದುಕೊಂಡೇ ಅದನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಬಹುದು ಅದು ಹಕ್ಕೊತ್ತಾಯದ ಲಕ್ಷಣಗಳಾದ ವಯಸ್ಸು, ಲಿಂಗ ಮತ್ತು ಚರ್ಮದ ಬಣ್ಣಗಳಿಗೆ ಸಂಬಂಧಿಸಿರಬಹುದು) ಜಾಸ್ತಿ ಕ್ರಿಯಾ ಶೀಲವಾಗಿರಬಹುದು (ವ್ಯಕ್ತಿಯ ವಾತಾವರಣದಲ್ಲಿನ ಬದಲಾವಣೆಗಳು ಅವನ/ಅವಳ ಆಕರ

ಲಕ್ಷಣಗಳಿಗೆ ಸಂಬಂಧಿಸಿರಬಹುದು ಉದಾ: ಭೌತಿಕ ಮಾನಸಿಕ ಅಥವಾ ಸಂವೇದನಾತ್ಮಕ ಇತ್ಯಾದಿ) ಜಾಸ್ತಿ ಕ್ರಿಯಾಶೀಲನಾಗಬಹುದು ( ವ್ಯಕ್ತಿಯು ಪರಿಸರವನ್ನು ಬದಲಾಯಿಸುವುದರಲ್ಲಿ, ಅದರ ವೇಗದಲ್ಲಿ ಅಂಶತಃ ಬದಲಾಯಿಸುವ ಆಸೆ, ಮುನ್ನುಗ್ಗುವಿಕೆ ಇತ್ಯಾದಿ ಅಥವಾ ಬಲದ ಲಕ್ಷಣಗಳಾಗಿರಬಹುದು)

**ಸಂದರ್ಭ:–** ಪರಿಸರ ಅಥವಾ ಸಂದರ್ಭವು ನಾಲ್ಕು ಅಂತರ್ ಮಿಳಿತ ವ್ಯವಸ್ಥೆಗಳನ್ನೊಳಗೊಂಡಿರುತ್ತದೆ. ಮೊದಲನೆಯದು ಪರಿಸರ ಅದರಲ್ಲಿ ಮನೆ, ಶಾಲೆ, ಓರಗೆಯ ಮಿತ್ರವೃಂದ , ಇತ್ಯಾದಿ, ಇವುಗಳಲ್ಲಿ ಬೆಳೆಯುವ ವ್ಯಕ್ತಿ ಸಾಕಷ್ಟು ಸಮಯವನ್ನು ಕಳೆಯುತ್ತಾನೆ. ಹಲವು ಬಗೆಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾನೆ ಮತ್ತು ಅಂತರ್ ಕ್ರಿಯೆಯಲ್ಲಿ ತೊಡಗುತ್ತಾನೆ ( ಅಂದರೆ ಅದು ಚಿಕ್ಕದೊಂದು ವ್ಯವಸ್ಥೆ) ಮನುಜರು ಒಂದು ಚಿಕ್ಕ ವ್ಯವಸ್ಥೆಯಲ್ಲಿ ಜಾಸ್ತಿ ಸಮಯ ಕಳೆಯುತ್ತಾ ಹೋಗುತ್ತಾರೆ. ಆಗ ಬ್ರಾನ್‌ಫೆನ್‌ಬ್ರೆನ್ನರ್ ಅವರ ಮಧ್ಯೆ ನಡೆಯುವ ಅಂತರ್ ಸಂಬಂಧಗಳ ಬಗ್ಗೆ ಬರೆಯುತ್ತಾರೆ. ( ಅಂದರೆ ನಡುವಿನ ವಯವಸ್ಥೆಯಾಗಬಹುದು). ಕೆಲವು ಮುಖ್ಯವಾದ ಸಂದರ್ಭಗಳಲ್ಲಿ ವ್ಯಕ್ತಿಗಳು ಭಾಗವಹಿಸದೆ ಇರಬಹುದು ಆದರೆ ಅವರ ಬೆಳವಣಿಗೆಗೆ ಮುಖ್ಯವಾದ ಪರೋಕ್ಷ ಪ್ರಭಾವಗಳಿರುತ್ತವೆ ( ಅಂದರೆ ಹೊರಗಣ ವ್ಯವಸ್ಥೆಯಾಗಬಹುದು). ಹೊರಗಣ ವ್ಯವಸ್ಥೆಯ ಒಂದು ಉದಾಹರಣೆಯೊಂದರೆ ತಾಯಿಯು ಕೆಲಸಕ್ಕೆ ಹೋಗುತ್ತಿದ್ದಾಗ, ಮಗು ಅದರಲ್ಲಿ ಭಾಗವಹಿಸುವುದಿಲ್ಲ. ಅದರೆ ತಾಯಿಗೆ ಅಲ್ಲಿನ ಒತ್ತಡದ ಸನ್ನಿವೇಶವು ಮಗುವಿನ ಮೇಲೆ ಕೂಗಾಡುವಂತೆ ಮಾಡುತ್ತದೆ. ಅಂದರೆ ಮಗುವಿನ ಮೇಲೆ ಪರೋಕ್ಷ ಪ್ರಬಾವ ಬೀರುತ್ತದೆ. ಕೊನೆಯದಾಗಿ ಬ್ರಾನ್‌ಫೆನ್‌ಬ್ರೆನ್ನರ್ ದೊಡ್ಡ ವ್ಯವಸ್ಥೆಯನ್ನು ವ್ಯಾಖ್ಯಾನಿಸುವುದು ಯಾವುದೇ ಗುಂಪಿನಲ್ಲಿ ಪ್ರಭಾವ ಬೀರುವ ಸಂದರ್ಭವೆನ್ನುತ್ತಾರೆ. ( ಸಂಸ್ಕೃತಿ, ಉಪಸಂಸ್ಕೃತಿ, ಅಥವಾ ಮುನ್ನಡೆದ ಸಾಮಾಜಿಕ ವಿನ್ಯಾಸವಾಗಿರಬಹುದು) ಅಲ್ಲಿ ವ್ಯಕ್ತಿಗಳು ಮೌಲ್ಯಗಳನ್ನು ಅಥವಾ ನಂಬಿಕೆಗಳನ್ನು ಹಂಚಿಕೊಳ್ಳಬಹುದು. ಆಕರಗಳು, ವ್ಯವಸ್ಥೆಯ ತೊಂದರೆಗಳು, ಜೀವನ ಶೈಲಿಗಳು, ಅವಕಾಶಗಳ ವಿನ್ಯಾಸಗಳು, ಜೀವನಾನುಕೂಲಿ ಅವಕಾಶಗಳು ಮತ್ತು ಸಾಮಾಜಿಕ ಅಂತರ್ ಬದಲಾವಣೆಗಳ ವಿನ್ಯಾಸಗಳು (1993 , ಪುಟ 25) . ದೊಡ್ಡ ವ್ಯವಸ್ಥೆಯು ಉಳಿದೆಲ್ಲ ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ, ಪ್ರಭಾವ ಬೀರುತ್ತದೆ ಅಥವಾ ಉಳಿದವುಗಳಿಂದ ಪ್ರಭಾವ ಹೊಂದುತ್ತದೆ. ಒಂದು ಗೊತ್ತಾದ ಸಾಂಸ್ಕೃತಿಕ ಗುಂಪು ಹಲವು ಮೌಲ್ಯಗಳನ್ನು ಹೊಂದಿರಬಹುದು ಆದರೆ ಒಂದು ಮೌಲ್ಯವು ಅಥವಾ ಮೌಲ್ಯ ವ್ಯವಸ್ಥೆಯು ಬೆಳೆಯುವ ವ್ಯಕ್ತಿಯ ಮೇಲೆ ಪ್ರಬಾವ ಬೀರುತ್ತದೆ, ಆದರೆ ಒಂದು ಅಥವಾ ಜಾಸ್ತಿ ಚಿಕ್ಕ ವ್ಯವಸ್ಥೆಯಲ್ಲಿ ವ್ಯಕ್ತಿ ನಿರತನಾಗಿದ್ದಾಗ ಯಾವುದನ್ನು ಆತ ಅನುಭವಿಸುತ್ತಾನೋ ಅದು ಮುಖ್ಯವಾದುದು.

**ಸಮಯ:–** ಪಿಪಿಸಿಟಿ ಮಾದರಿಯ ಕೊನೆಯ ಅಂಶವೆಂದರೆ ಸಮಯ ಯಾವುದೇ ಸಿದ್ಧಾಂತಕ್ಕೆ ಹೊಂದಿಕೊಳ್ಳುವಂತೆ ಮನುಷ್ಯನ ಬೆಳವಣಿಗೆಯಲ್ಲಿ ಸಮಯವು ಬಹುಮುಖ್ಯವಾದ ಪಾತ್ರ ವಹಿಸುತ್ತದೆ

ಅಂದರೆ ಸಿದ್ಧಾಂತಕ್ಕೆ ಸಂಬಂಧಿಸಿದಂತೆ. ಇದೇ ರೀತಿಯಲ್ಲಿ ಸಂದರ್ಭ ಮತ್ತು ವ್ಯಕ್ತಿಯ ಅಂಶಗಳನ್ನು ಉಪ ಭಾಗಗಳಾಗಿ ವಿಭಾಗಿಸಲ್ಪಡುತ್ತದೆ. ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ (1998) ಅತಿ ಚಿಕ್ಕ ಸಮಯವನ್ನು ಪರಿಗಣಿಸಿದರು ( ಯಾವುದೇ ವಿಶಿಷ್ಟ ಚಟುವಟಿಕೆ ಅಥವಾ ಅಂತರ್ ಕ್ರಿಯೆಯಲ್ಲಿರಬಹುದು). ನಡುವಿನ ಸಮಯ ( ಬೆಳೆಯುವ ಮುನುಷ್ಯನ ಪರಿಸರದಲ್ಲಿ ಮತ್ತೆ ಮತ್ತೆ ಉಂಟಾಗುವ ಚಟುವಟಿಕೆಗಳು ಅಥವಾ ಅಂತರ್ ಕ್ರಿಯೆಗಳು) ಮತ್ತು ದೊಡ್ಡ ಸಮಯ ( ಅಂದರೆ ಬ್ರಾನ್‌ಫೆನ್‌ಬ್ರೆನ್ನರ್ ಮುಂಚೆ ಉಪಯೋಗಿಸಿದ್ದ "ಕಾಲ ಮಾಪಿ ವ್ಯವಸ್ಥೆ"). ಈ ಪದಪುಂಜವು ಬೆಳವಣಿಗಯ ಪ್ರಕ್ರಿಯೆಗಳ ವ್ಯಕ್ತಿ ಭಾಗವಹಿಸುತ್ತಾನೆ ಅಂದರೆ ಬೇರೆ ಬೇರೆ ಸಮಯಗಳಲ್ಲಿ ಬೇರೆ ಬೇರೆ ಚಾರಿತ್ರಿಕ ಸಮಯದಲ್ಲಿ ಭಾಗವಹಿಸಿ ಅನುಭವ ಪಡೆದಿರುತ್ತಾನೆ ಎನ್ನುವುದನ್ನು ಸೂಚಿಸುತ್ತದೆ. ಈ ವಿಷಯವನ್ನು ಎಲ್ಡರ್ (1974,1996) ತಮ್ಮ ಸಂಶೋಧನೆಯಲ್ಲಿ ಚೆನ್ನಾಗಿ ಹಿಡಿದಿಟ್ಟುಕೊಂಡಿದ್ದಾರೆ ಹಾಗೂ ಎರಡು ಕುಟುಂಬಗಳು ಬೆಳೆದ ದೂರಗಾಮಿ ರೀತಿಯಲ್ಲಿ ಮತ್ತು ಅದೇ ಭೌಗೋಳಿಕ ಪರಿಸರದಲ್ಲಿ ಹುಟ್ಟಿದ್ದರೂ 10 ವರ್ಷಗಳ ವ್ಯತ್ಯಾಸದಲ್ಲಿದ್ದಾಗಿನ ಪರಿಸ್ಥಿತಿಯನ್ನು ಚೆನ್ನಾಗಿ ಪ್ರದರ್ಶಿಸಿದ್ದಾರೆ, ಪ್ರತಿಯೊಂದು ಕುಟುಂಬವೂ ಅಮೆರಿಕೆಯ ಭೀಕರ ವ್ಯಾಪಾರ ಕುಸಿತವನ್ನು ಅನುಭವಿಸಿತ್ತು. ಆದರೆ ಬೇರೆ ಬೇರೆ ಸಮಯಗಳಲ್ಲಿ ಅನುಭವಿಸಿದ್ದರಿಂದ ಸಂಬಂಧಿತ ಚಾರಿತ್ರಿಕ ಘಟನೆಗಳನ್ನು ಬೇರೆಯಾಗಿಯೇ ಅರ್ಥೈಸಿಕೊಂಡಿತ್ತು. ಅಂದರೆ ಜೀವನದ ಬೇರೆ ಬೇರೆ ಕಾಲದಲ್ಲಿ ಅನುಭವಿಸಿತು.

ಕಾಲ ಮತ್ತು ಕಾಲವನ್ನಾಳೆಯುವುದು, ಎರಡೂ ಪಿ.ಪಿ.ಸಿಟಿ ಮಾದರಿಯಲ್ಲಿ ಸಮವಾಗಿ ಮುಖ್ಯವೆನ್ನಿಸುತ್ತದೆ. ಏಕೆಂದರೆ ಸಾಪೇಕ್ಷ ಸ್ಥಿರತೆ ಮತ್ತು ಬದಲಾವಣೆಗಳ ದೃಷ್ಟಿಯಲ್ಲಿ ನೋಡಿದಾಗ. ಬೆಳೆಯುವ ವ್ಯಕ್ತಿಗಳ ಬಗ್ಗೆ ಯೋಚಿಸಿದಾಗ ಅವರು ಭಾಗವಹಿಸಿದ ಚಟುವಟಿಕೆಗಳು ಮತ್ತು ಅಂತರ್ ಕ್ರಿಯಗಳ ಬಗ್ಗೆ ಚಿಂತಿಸಿದಾಗ, ಅಥವಾ ಅವರು ಭಾಗವಹಿಸಿದ್ದ ಸೂಕ್ಷ್ಮ ವ್ಯವಸ್ಥೆಗಳನ್ನು ಅವಲೋಕಿಸಿದಾಗ ಇದು ಸರಿಯೆನ್ನಿಸುತ್ತದೆ. ಅದು ಅಲ್ಲದೆ, ಸಂಸ್ಕೃತಿಗಳು ಬದಲಾಗುತ್ತಲೇ ಇರುತ್ತವೆ. ಹಾಗೂ ಕೆಲವು ಕಾಲಗಳ ಹಂತಗಳಲ್ಲಿ ಚಾರಿತ್ರಿಕ ಸಮಯಗಳಲ್ಲಿ ಸಾಮಾಜಿಕ ಬದಲಾವಣೆಗಳು ವೇಗವಾಗಿ ನಡೆಯುತ್ತಿರುತ್ತವೆ.

ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತದ ಪರಿಪಕ್ವವಾದ ಮಾದರಿಯು ಮೇಲಿನ ಸಂಶೋಧನೆಯು ಪಿ.ಪಿ.ಸಿ.ಟಿ ಮಾದರಿಯ ಎಲ್ಲಾ ಅಂಶಗಳನ್ನು ಒಳಗೊಂಡಿದ್ದರೆ ಆಗ ಆ ಮಾದರಿಯನ್ನು ಪೂರ್ಣ ಪರೀಕ್ಷಿಸಿದಂತಾಗುತ್ತದೆ. ಕೆಲವು ಭಾಗದ ಪರೀಕ್ಷೆಗಳು ಸಾಧ್ಯವಾಗಿರುತ್ತದೆ ಮತ್ತೆ ಅವುಗಳನ್ನು ಅಂತೆಯೇ ಗುರುತಿಸಿರಬೇಕು. ಸಂಶೋಧನಾ ವಿನ್ಯಾಸವು ಪ್ರಕ್ರಿಯಾ ಅಂಶದ ಮೇಲೆ ( ಸಾಮೀಪ್ಯ ಪ್ರಕ್ರಿಯೆಗಳು) ಅಥವಾ ಅದರ ಅಳತೆಯನ್ನುವಲಂಬಿಸಿರದಿದ್ದರೆ ( ವೀಕ್ಷಣೆ, ಸಂದರ್ಶನ ಅಥವಾ ಪ್ರಶ್ನಾವಳಿಗಳ ಮೂಲಕ ನಡೆದಿದ್ದು) ಅದನ್ನು ಒಂದು ಪಕ್ವವಾದ ಸಂಶೋಧನೆಯೆಂದು ಕರೆಯಲಾಗುವುದಿಲ್ಲ. ಅಳತೆಯು ಮುಖ್ಯವಾದ ಚಟುವಟಿಕೆಗಳನ್ನು ಮತ್ತು ಅಂತರ್ ಕ್ರಿಯೆಗಳನ್ನು ಸದಸ್ಯರ ಬೆಳವಣಿಗೆಯು ಆಸಕ್ತಿಯ

ಫಲಗಳನ್ನು ಪರೀಕ್ಷಿಸದಿದ್ದಲ್ಲಿ ಸಂಬಂಧಪಟ್ಟ ಸಂಶೋಧನೆಯೆಂದು ಹೇಳಲಾಗುವುದಿಲ್ಲ. ವ್ಯಕ್ತಿಯ ಅಂಶದ ಲಕ್ಷಣಗಳು ಸಾಮೀಪ್ಯ ಪ್ರಕ್ರಿಯೆಗಳನ್ನು ಹೇಗೆ ಪ್ರಭಾವಗೊಳಿಸುತ್ತವೆಂದು ತಿಳಿಯಬೇಕಾದಲ್ಲಿ ಕನಿಷ್ಟ ಸಾಧ್ಯತೆಯೆಂದರೆ ಹಕ್ಕೊತ್ತಾಯದ ಲಕ್ಷಣಗಳಾದ ವಯಸ್ಸು, ಮುಖ ಲಕ್ಷಣ, ಅಥವಾ ಅಂಗವು ಯಾವ ರೀತಿ ಚಟುವಟಿಕೆಗಳನ್ನು ಅಥವಾ ಅಂತರ್ ಕ್ರಿಯೆಗಳನ್ನು ಬದಲಾಯಿಸಿತೆಂದು ಪರೀಕ್ಷಿಸಬೇಕು, ಇನ್ನೂ ಒಳ್ಳೆಯ ಸಂಶೋಧನಾ ವಿನ್ಯಾಸವು ಆಕರ ಅಥವಾ ಬಲದ ಲಕ್ಷಣಗಳನ್ನು ವ್ಯಕ್ತಿಗಳ ದೃಷ್ಟಿಯಿಂದ ಅವರನ್ನು ಪ್ರಭಾವಿಸಿದ ಬಗೆಯನ್ನು ಆ ಚಟುವಟಿಕೆಗಳು ಮತ್ತು ಅಂತರ್ ಕ್ರಿಯೆ ನಡೆದ ರೀತಿಯನ್ನು ಪರೀಕ್ಷಿಸುತ್ತದೆ. ಸಂದರ್ಭವು ಸಹ ಸಾಮೀಪ್ಯ ಪ್ರಕ್ರಿಯೆಗಳನ್ನು ಪ್ರಭಾವಿಸುತ್ತದೆ, ಇಲ್ಲಿ ಕನಿಷ್ಠ ಸಾಧ್ಯತೆಯೆಂದರೆ ಬೇರೆ ಬೇರೆ ಬಗೆಯ ಪ್ರಭಾವವನ್ನು ಎರಡು ಸೂಕ್ಷ್ಮ ವ್ಯವಸ್ಥೆಗಳು ಕುಟುಂಬ ಮತ್ತು ಶಾಲೆಗಳಿರಬಹುದು ಅಥವಾ ಎರಡು ದೊಡ್ಡ ವ್ಯವಸ್ಥೆಗಳು (ಮಧ್ಯಮ ಅಥವಾ ಕೆಲಸಗಾರ ಕುಟುಂಬಗಳು ಅಥವಾ ಬೇರೆ ಸಾಂಸ್ಕೃತಿಕ ಗುಂಪುಗಳಿಗೆ ಸೇರಿದ ಹದಿ ಹರೆಯದ ಮಕ್ಕಳು) ಚಟುವಟಿಕೆಗಳ ಮೇಲೆ ಮತ್ತುಆಸಕ್ತಿಯ ಅಂತರ್ ಕ್ರಿಯೆಗೆ ಬೀರುತ್ತವೆ ಎಂದು ಮೌಲ್ಯಮಾಪನ ಮಾಡುವುದು. ಕೊನೆಯದಾಗಿ, ಸಮಯದಲ್ಲಿ ಅಧ್ಯಯನವು ಹೆಚ್ಚುಕಾಲ ನಡೆಯಬೇಕು ( ವ್ಯಕ್ತಿಯ ಲಕ್ಷಣಗಳು ಮತ್ತು ಸಂದರ್ಭಗಳು ಯಾವರೀತಿ ಬೆಳವಣಿಗೆಯ ಆಸಕ್ತಿಯ ಫಲಗಳ ಮೇಲೆ ಪರಸ್ಪರ ಪ್ರಭಾವ ಬೀರುತ್ತವೆ ಎಂಬುದನ್ನು ಮೌಲ್ಯಮಾಪನ ಮಾಡಬೇಕು) ಹಾಗೂ ಅದು ಯಾವುದು ನಡೆಯುತ್ತಿದೆಯೋ ಅದನ್ನು ಪರಿಗಣಿಸಬೇಕು ಮತ್ತು ಯಾವ ಚಾರಿತ್ರಿಕ ಕಾಲಘಟ್ಟದಲ್ಲಿ ನಡೆಯುತ್ತಿದೆ ಎಂಬುದನ್ನು ಗುರುತಿಸಬೇಕು.

ಈ ಪ್ರಬಂಧದ ಕೇಂದ್ರಾಂಶವೆಂದರೆ ಸಮಕಾಲೀನ ವಿದ್ವಾಂಸರು ಯಾವ ರೀತಿ ಸೂಕ್ತವಾಗಿ ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತದ ಪೂರ್ಣ ರೂಪವನ್ನು ತಮ್ಮ ಸಂಶೋಧನಾ ಅಧ್ಯಯನ / ವಿನ್ಯಾಸಗಳಲ್ಲಿ ಉಪಯೋಗಿಸಿದ್ದಾರೆಂಬುದನ್ನು ಮೌಲ್ಯಮಾಪನ ಮಾಡುವುದಾಗಿದೆ. ಆದ್ದರಿಂದಲೇ 1990ಕ್ಕೆ ಮುಂಚೆ ಪ್ರಬಂಧಗಳನ್ನು ಪರಿಪಕ್ವ ಸಿದ್ಧಾಂತವನ್ನು ಉಪಯೋಗಿಸಿಲ್ಲವೆಂದು ಪರಿಗಣಿಸಿಲ್ಲ, ಅಲ್ಲದೆ 2001 ರಿಂದ ಮಾರ್ಚ್ 2008 ರವರೆಗಿನ ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತವನ್ನು ಉಪಯೋಗಿಸಿದ್ದಾರೆಂದು ಪರಿಗಣಿಸಲಾಗಿದೆ. ಯಾವ ಪ್ರಬಂಧಕಾರರು ತಾವು ಮುಂಚಿನ ಭಾಗವನ್ನು ಉಪಯೋಗಿಸಿದ್ದಾರೆಂದು ವಿಶೇಷವಾಗಿ ಹೇಳಿಕೊಂಡಿದ್ದಾರೆಯೋ ಅಥವಾ ಮುಂಚಿನ ಸೀಮಿತ ಕಲ್ಪನೆಗಳ ಗಣಗಳನ್ನು ಉಪಯೋಗಿಸಿದ್ದೆವೆಂದು ಒಪ್ಪಿಕೊಂಡಿದ್ದಾರೆಯೋ ಅಂತಹ ಪ್ರಬಂಧಗಳನ್ನು ಬಿಡಲಾಗಿದೆ. ಇವು ಸಂಪೂರ್ಣವಾಗಿ ಒಪ್ಪಿಕೊಳ್ಳತಕ್ಕಂತಹ. ವಿಧಾನಗಳು, ಯಾರು ತಮ್ಮ ಸಂಶೋಧನೆಯಲ್ಲಿ ಪಕ್ವವಾದ ಅಥವಾ ಪೂರ್ಣ ಪ್ರಮಾಣದ ಸಿದ್ಧಾಂತವನ್ನು ಉಪಯೋಗಿಸಿಲ್ಲವೆಂದು ಹೇಳಿದ್ದಾರೆಯೋ ಅಂತಹವನ್ನು ಕೈ ಬಿಡಲಾಗಿದೆ. ಹಲವಾರು ಲೇಖಕರು ತಾವು ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತದ ಮುಂಚಿನ ಭಾಗವನ್ನು ಮಾತ್ರ ಪರಿಗಣಿಸಿದ್ದೇವೆಂದು ವ್ಯಕ್ತಿ. ಪರಿಸರಗಳ ಸಂಬಂಧಗಳನ್ನು ಮಾತ್ರ ಪರಿಗಣಿಸಿದ್ದೇವೆಂದು ನಿಖರವಾಗಿ

ಹೇಳಿದ್ದಾರೆ. ಆದ್ದರಿಂದ ಈ ಪ್ರಬಂಧಗಳು , ನಾವು ಅಂದುಕೊಂಡಿರುವಂಥೆ ಸಮಸ್ಯೆಯನ್ನು ಬಿಡಿಸಲು ಪರಿಷ್ಕೃತಗೊಳಿಸಿದ ಬಗೆಯನ್ನು ಪರಿಗಣಿಸಿಲ್ಲ ಅಥವಾ ತುಂಬಾ ಸೀಮಿತವಾದದದ್ದಕ್ಕೆ ಇಳಿಸಿಬಿಡುವ ಸಾದ್ಯತೆಯಿದೆ.

**ವಿಧಾನಗಳು**

ಅಧ್ಯಯನಗಳನ್ನು ಪರೀಕ್ಷಿಸಲು ಹುಡುಕುವ ಸಲುವಾಗಿ ನಾವುಬಹಳ ವಿಸ್ತಾರವಾದ ಹುಡುಕುವಿಕೆಯನ್ನು ಕೈಗೊಂಡೆವು. ಉಪಯೋಗಿಸಿದ ಆಕರಗಳೆಂದರೆ psy INFO, Educationn Index, EBSCO host, proQuest, Google ಮತ್ತು ಗೂಗಲ್ ಸ್ಕಾಲರ್ಗಳು ಉಪಯೋಗಿದ ಕೀಲಿ ಪದಗಳೆಂದರೆ ಬ್ರಾನ್‌ಫೆನ್‌ಬ್ರೆನ್ನರ್, ಪಿ.ಪಿ.ಸಿ.ಟಿ ,ಪರಿಸರವಾದಿ ಸಿದ್ಧಾಂತ, ಪರಿಸರ ವ್ಯವಸ್ಥೆ ಸಿದ್ಧಾಂತ, ಜೈವಿಕ ಪರಿಸರ ಸಿದ್ದಾಂತಮತ್ತು ಪ್ರಕ್ರಿಯೆ–ವ್ಯಕ್ತಿ–ಸಂದರ್ಭ–ಕಾಲ ಸಮಯ ಹುಡುಕುವ ಬಗೆಯನ್ನು ಕೆಲವು ಪ್ರಕಾಶನ ಸಂಸ್ಥೆಗಳು ( ಸೇಜ್, ಉದಾಹರಣೆ) ಒದಗಿಸಿದ್ದು ಅವುಗಳನ್ನು ವಿಶಿಷ್ಠವಾದ ನಿಯತಕಾಲಿಕೆಗಳನ್ನು ಹುಡುಕಲು ಉಪಯೋಗಿಸಿದೆವು. 2001 ರಿಂದ ಮಾರ್ಚ್ 2008ರವರೆಗಿನ ಎಲ್ಲಾ ಪ್ರಬಂದಗಳನ್ನು ಹುಡುಕಿ ಕಲೆಹಾಕಿದ್ದೇವೆಂದು ನಾವು ಹೇಳಿಕೊಳ್ಳುವುದಿಲ್ಲ, ನಮ್ಮ ಅಧ್ಯಯನವು ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತದ ಬಗೆಗೆಂದು ತಿಳಿಸಿದ್ದೆವು ನಮ್ಮ ಹುಡುಕುವಿಕೆಯು ಸಾಕಷ್ಟು ವಿಶಾಲವಾಗಿತ್ತು ಆದರೆ ಅದು ಸಂಪೂರ್ಣವಾಗಿದೆಯೆಂದು ಹೇಳಿಕೊಳ್ಳುವುದಿಲ್ಲ. ಆದರೂ ಕೂಡ , 25 ಪ್ರಕಟಿತ ಅಧ್ಯಯನಗಳು ಯಾವುವು ನಮ್ಮ ಮಾನದಂಡಗಳಿಗೆ ಹೊಂದಿಕೊಳ್ಳುತ್ತವೆಯೋ ಅಂತವನ್ನು ಹುಡುಕಿದ್ದೇವೆ ಎಂದು ತಿಳಿಸಲು ಹರ್ಷವಾಗುತ್ತದೆ.

**ಫಲಿತಾಂಶಗಳು ಅಥವಾ ಸಿದ್ಧಾಂತದ ಉಪಯೋಗಗಳು ಮತ್ತು ದುರುಪಯೋಗಗಳು ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತದ ಸೂಕ್ತ ಉಪಯೋಗಗಳು:–**

ನಾವು ಆರಿಸಿದ 25 ಅಧ್ಯಯನಗಳಲ್ಲಿ ನಾಲ್ಕರಲ್ಲಿ ಮಾತ್ರ ಸಂಶೋಧಕರು ಬ್ರಾನ್‌ಫೆನ್‌ಬ್ರೆನ್ನರ್‌ರ ಪಕ್ವವಾದ ಸಿದ್ಧಾಂತವನ್ನು ತಮ್ಮ ಸಂಶೋಧನೆಗೆ ಉಪಯೋಗಿಸಿಕೊಂಡಿದ್ದರು ಅಂದರೆ ಮೂರನ್ನಾದರೂ ಪಿಪಿಸಿಟಿ ಕಲ್ಪನೆಗಳಲ್ಲಿ ಉಪಯೋಗಿಸಿಕೊಂಡಿದ್ದರು ಹಾಗೂ ಸಾಮೀಪ್ಯ ಪ್ರಕ್ರಿಯೆಗಳನ್ನು ಸಹ ಸೇರಿಸಿದ್ದರು. ಆಡಮ್ ಸನ್ಸ್, ಓಬ್ರಿಯಾನ್ ಮತ್ತು ಪಾಸ್ಲೆ (2007) , ಕ್ಯಾಂಪ್ ಬೆಲ್, ವುಂಜೆಲೊ ಮತ್ತು ಮಿಲ್ಲರ್–ಜಾನ್‌ಸನ್ (2002), ರಿಗ್ಗಿನ್ಸ್–ಕ್ಯಾಸ್ ಪರ್ಸ್, ಕಡೊರೆಟ್, ನಟ್‌ಸನ್ ಮತ್ತು ಲಾಂಗ ಬೆಹನ್ (2003) ಮತ್ತು ಟಡ್ಜ್ ,ಓಡೆರೊ , ಹೋಗನ್ ಮತ್ತು ಎಡ್ಜ್ (2003) ಇವರುಗಳು ಸಿದ್ಧಾಂತವನ್ನು ಸರಿಯಾಗಿ

ಪರಿಪಕ್ವವಾದೀ ರೂಪದಲ್ಲಿ ಉಪಯೋಗಿಸಿ, ಸೈದ್ಧಾಂತಿಕ ಕಲ್ಪನೆಗಳನ್ನು ಸೂಕ್ತವಾದ ಸಂಶೋಧನಾ ವಿನ್ಯಾಸಗಳಿಂದ ಪರೀಕ್ಷಿಸಿದ್ದರು.

ಆಡಮ್ ಸನ್ಸ್ ಮತ್ತು ಆಕೆಯ ಸಹೋದ್ಯೋಗಿಗಳು ತಂದೆಯ ಒಳಗೊಳ್ಳುವಿಕೆ, ತಂದೆ–ಮಗುವಿನ ಅಂತರ್ ಕ್ರಿಯೆಗಳು ಇವುಗಳ ವ್ಯತ್ಯಾಸಗಳನ್ನು ಪರೀಕ್ಷಿಸಿದರು ಅಲ್ಲದೆ ನಿಜವಾದ ತಂದೆ ಹಾಗು ಮಲ ತಂದೆಯರ ಮಧ್ಯದ ವ್ಯತ್ಯಾಸಗಳನ್ನು ಪರೀಕ್ಷಿಸಿದರು ಮತ್ತು ಪಿ.ಪಿ.ಸಿ.ಟಿ ಮಾದರಿಯ ನಾಲ್ಕು ಅಂಶಗಳಿಗೆ ನೇರವಾಗಿ ಕೊಂಡಿ ಕಲ್ಪಿಸಿ ನೋಡಿದರು. ಮಾದ್ಯಮಿಕ ದತ್ತಾಂಶಗಳ ವಿಶ್ಲೇಷಣೆಗಳು ಮತ್ತು ಅಡ್ಡ ಕೊಯ್ತ ವಿಧಾನದ ಅಧ್ಯಯನದ ವಿಧಾನವು ಲೇಖಕರಿಗೆ ಕೆಲವು ಮಿತಿಗಳನ್ನು ಹೇರುತ್ತೆನ್ನಿಸುತ್ತದೆ ಅಲ್ಲದೆ, ಪಿ.ಪಿ.ಸಿ.ಟಿ ಮಾದರಿಯನ್ನು ಪೂರ್ಣವಾಗಿ ಉಪಯೋಗಿಸಿಕೊಂಡಿಲ್ಲವೆನ್ನಿಸುತ್ತದೆ, ಅಲ್ಲದೆ ನಾವು ಲೇಖಕರ ಅಭಿಪ್ರಾಯವನ್ನು ಒಪ್ಪುವುದಿಲ್ಲ ಏಕೆಂದರೆ ಮಲ ತಂದೆಯು ಎಷ್ಟು ಕಾಲ ಕುಟುಂಬದೊಡನೆ ಕಳೆದಿದ್ದಾನೆ ಎಂಬ ಸಮಯದ ಲೆಕ್ಕಾಚಾರವು ಸರಿಯಲ್ಲವೆನ್ನಿಸುತ್ತದೆ. ಈ ಚರಾಂಶವು ಬ್ರಾನ್‌ಫೆನ್‌ಬ್ರೆನ್ನರ್ ಕಾಲದ ಬಗ್ಗೆ ಕಲ್ಪಿಸಿಕೊಂಡಿರುವ ರೀತಿಯಲ್ಲಿ ಇಲ್ಲವೆನ್ನಿಸುತ್ತದೆ. ಇಂತಹ ಅಧ್ಯಯನಗಳಲ್ಲಿ ಸಮಯವನ್ನು ಅಳತೆ ಮಾಡಲು ಸಾಧ್ಯವಾಗಲಿಲ್ಲವೆಂದು, ಅದು ಸಂಶೋಧನಾ ವಿನ್ಯಾಸದ ಮಿತಿಯೆಂದು ಒಪ್ಪಿಕೊಳ್ಳಬಹುದಿತ್ತು ಹಾಗೂ ಇದನ್ನು ಅಧ್ಯಯನದ ಮಿತಿಯೆಂದು ಹೇಳಬಹುದಿತ್ತು.

ತಂದೆಯರನ್ನು ಆಸಕ್ತಿಯುತ ಬೆಳೆಯುವ ವ್ಯಕ್ತಿಗಳೆಂದು ಪರಿಗಣಿಸಲಾಯ್ತು, ತಂದೆಯಂದಿರ ಒಡನಾಟ ಮತ್ತು ಮಕ್ಕಳೊಡನೆ ಅವರ ಅಂತರ್ ಕ್ರಿಯೆಗಳನ್ನು ಇಲ್ಲಿ ಫಲಿತಗಳೆಂದು ನಿರೂಪಿಸಲಾಗಿದೆ. ಅಂದರೆ ವ್ಯಕ್ತಿಯ ಅಂಶವನ್ನು ಅಳೆಯಲಾಯ್ತು ಹಾಗೂ ಇಲ್ಲಿ ಕುಟುಂಬದಲ್ಲಿ ತಂದೆಯ ಸ್ಥಾನ (ನೈಜ ಅಥವಾ ಮಲ ತಂದೆಯಿರಬಹುದು) ಅವರ ವಯಸ್ಸು ಜನಾಂಗ ಕೌಟುಂಬಿಕ ನಂಬಿಕೆಗಳು, ಮತ್ತು ಆತನ ಕುಟುಂಬದ ತೃಪ್ತಿಯನ್ನು ಪರಿಗಣಿಸಲಾಯ್ತು. ಲೇಖಕರು ಇಲ್ಲಿ ಮಗುವಿನ ಲಿಂಗವನ್ನು ವ್ಯಕ್ತಿಯ ಅಂಶವಾಗಿ ಪರಿಗಣಿಸಿದರು ( ಮಗು) ಏಕೆಂದರೆ ಆ ಮಗುವಿನೊಡನೆ ಅಂತರ್ ಕ್ರಿಯೆಯಲ್ಲಿ ತೊಡಗಿದ್ದ ಬೆಳೆಯುತ್ತಿರುವ ಆಸಕ್ತಿದಾಯಕ ವ್ಯಕ್ತಿ ( ತಂದೆ) ಎಂದು ಸೇರಿಸಲಾಯ್ತು. ಆಡಮ್ ಸನ್ ಮತ್ತಿತರರು (2007) ಹೇಳಿರುವಂತೆ ಅಡ್ಡ ಕೊಯ್ತದ ವಿಶ್ಲೇಷಣೆಯು ಬೆಳೆಯುವಿಕೆಯನ್ನು ಒಂದು ಪ್ರಕ್ರಿಯೆಯಾಗಿ ಪರೀಕ್ಷಿಸಲು ಸಾಧ್ಯವಾಗಲಿಲ್ಲವೆಂದು ಹೇಳುತ್ತಾರೆ, ಹಾಗೂ ಅವರ ಪ್ರಕ್ರಿಯೆಯ ಕಲ್ಪನೆಯು ಬ್ರಾನ್‌ಫೆನ್‌ಬ್ರೆನ್ನರ್‌ರವರಿಂದ ಬೇರೆಯಾಯಿತೆಂದು ಅಭಿಪ್ರಾಯಪಡುತ್ತಾರೆ. ಆದರೆ ನಾವು ಪರೀಕ್ಷಿಸಿದಾಗ ತಂದೆ–ಮಗುವಿನ ಕೂಡಾಟವು ಸಾಕಷ್ಟು ಒಳ್ಳೆಯ ಸಾಮೀಪ್ಯ ಪ್ರಕ್ರಿಯೆಯ ಸನ್ನಿವೇಶವೆನ್ನಿಸುತ್ತದೆ.

ಒಟ್ಟಿನಲ್ಲಿ ನಾವು ಅಂದುಕೊಂಡದ್ದು ಆಡಮ್ ಸನ್ಸ್ ಮತ್ತು ಆಕೆಯ ಸಹೋದ್ಯೋಗಿಗಳು ಪಿಪಿಸಿಟಿ ಮದರಿಯನ್ನು ಸೂಕ್ತವಾಗಿಯೇ ಅಧ್ಯಯನದಲ್ಲಿ ಉಪಯೋಗಿಸಿದ್ದಾರೆ: ಲೇಖಕರು ಸಿದ್ಧಾಂತದ ಎಲ್ಲಾ

ಅಂಶಗಳನ್ನು ಚರ್ಚಿಸಿದ್ದಾರೆ, ತಮ್ಮ ಕಲ್ಪನೆಯಲ್ಲುಂಟಾದ ಸಣ್ಣ ಪುಟ್ಟ ವ್ಯತ್ಯಾಸಗಳನ್ನು ಅಥವಾ ಕೆಲವು ಅಂಶಗಳ ಇಲ್ಲದಿರುವಿಕೆಯನ್ನು ಒಪ್ಪಿಕೊಳ್ಳುತ್ತಾರೆ, ತಮ್ಮ ಫಲಿತಾಂಶಗಳನ್ನು ಬ್ರಾನ್‌ಫೆನ್‌ಬ್ರೆನ್ನರ್‌ರ ಸೈದ್ಧಾಂತಿಕ ದೃಷ್ಟಿಕೋನದಿಂದಲೂ ಪರಿಶೀಲಿಸಿದ್ದಾರೆ, ಮತ್ತು ಮುಂದಿನ ಒಳ್ಳೆಯ ಸಂಶೋಧನೆಗಳಿಗೆ ಕಲವು ಸಲಹೆಗಳನ್ನಿತ್ತಿದ್ದಾರೆ ಮತ್ತು ಮಕ್ಕಳೊಡನೆ ತಂದೆಯಂದಿರ ಒಡನಾಟದ ಬಗ್ಗೆ ಪರೀಕ್ಷಿಸಲು ಜೈವಿಕ ಪರಿಸರವಾದೀ ಸಿದ್ಧಾಂತವನ್ನು ಪೂರ್ಣ ಉಪಯೋಗಿಸಿಕೊಳ್ಳಲು ಸೂಚಿಸಿದ್ದಾರೆ.

ರಿಗ್ಗಿನ್ಸ್ ಕಾಸ್ಪರ್ಸ್ ಮತ್ತು ಆಕೆಯ ಸಹೋದ್ಯೋಗಿಗಳು ಜೈವಿಕ ಪರಿಸರ ಸಿದ್ಧಾಂತದ ಕೆಲವು ಮುಖ್ಯಾಂಶಗಳನ್ನು ಚೆನ್ನಾಗಿ ಎತ್ತಿಹಿಡಿದಿದ್ದಾರೆ. ಬ್ರಾನ್‌ಫೆನ್‌ಬ್ರೆನ್ನರ್ ಮತು ಸೆಸಿ(1994) ಅವರಿಂದ ಸಾಕಷ್ಟು ಅನುಕೂಲತೆ ಪಡೆದಿದ್ದಾರೆ. ಇಲ್ಲಿ ಅಧ್ಯಯನದ ಉದ್ದೇಶವು ಜೀವಿ ಪರಿಸರದ ಅಂತರ್ ಕ್ರಿಯೆಗಳನ್ನು ಮಾನಸಿಕ ರೋಗ ಲಕ್ಷಣ ಶಾಸ್ತ್ರದ ಮೂಲಕ ನೋಡುವುದಿತ್ತು ಹಾಗೂ ನೈಜ ಮತ್ತು ಸಾಕಿದ ತಂದೆ ತಾಯಿಯರ ಕೊಡುಗೆಗಳನ್ನು ಪರಿಗಣಿಸುವುದಿತ್ತು ದತ್ತು ತೆಗೆದುಕೊಂಡ ಹದಿಹರೆಯದವರ ಸಮಸ್ಯೆಗಳು ಅತಿ ಶಿಸ್ತಿನ ಕಾರಣದಿಂದ ಉಂಟಾದವು ಮುಂತಾದವನ್ನು ಅಳೆಯುವುದಿತ್ತು. ಲೇಖಕರು ಎಲ್ಲಾ ಚರಾಂಶಗಳ ಪರಸ್ಪರ ಸಂಬಂಧಗಳನ್ನು ವಿವರವಾಗಿ ಹೇಳಿ ಬ್ರಾನ್‌ಫೆನ್‌ಬ್ರೆನ್ನರ್‌ರ ಮಾದರಿಯ ಎಲ್ಲಾ ಅಂಶಗಳೊಡನೆ ವಿವರಿಸಿದರು. ಸಾಮೀಪ್ಯ ಪ್ರಕ್ರಿಯೆಗಳನ್ನು ಸಾಕಿದ ತಂದೆ ತಾಯಿಯರ ಅತಿ ಶಿಸ್ತಿನ ನಡವಳಿಕೆಯ ಮೂಲಕ ಅಳೆಯಲಾಯ್ತು . ಇಲ್ಲಿ ಅವು ಯಾವ ರೀತಿ ವ್ಯಕ್ತಿಯ ಲಕ್ಷಣಗಳಾಗಿ ಮಕ್ಕಳನ್ನು ಪ್ರಭಾವಿಸಿತ್ತು ( ಅವರ ಸಮಸ್ಯಾತ್ಮಕ ನಡವಳಿಕೆಗೆ ತಯಾರಿದ್ದದ್ದು, ಅಲ್ಲದೆ ಅವರ ತಂದೆ ತಾಯಿಯರ ಮಾನಸಿಕ ರೋಗ ಲಕ್ಷಣಕ್ಕೆ ಸಂಬಂಧಪಟ್ಟಂತೆ) ಮತ್ತು ಪರಿಸರ ಸಹ ಕಾರಣವಾಯ್ತು ( ಕಡಿಮೆ ಅಥವಾ ಮಧ್ಯಮ ಪ್ರಮಾಣದಲ್ಲಿರುವ ಸಾಕಿದ ತಂದೆ–ತಾಯಿಯರು ಮಾನಸಿಕ ರೋಗಲಕ್ಷಣಗಳ ಮಟ್ಟವೆನ್ನಬಹುದು). ದುರಾದೃಷ್ಟವೆಂದರೆ, ಈ ಪರಿಸರದ ಅಳತೆಯು ವ್ಯಕ್ತಿ ಸಂಬಂಧಿತ ಲಕ್ಷಣಗಳಿಂದ ತೀರ್ಮಾನಿಸಲಾಯ್ತು ( ಮಾದಕ ವಸ್ತು ಮತ್ತು ಕುಡಿತದ ಸಮಸ್ಯೆಗಳು, ಕಾನೂನು ಸಮಸ್ಯೆಗಳು, ಖಿನ್ನತೆ, ಆತಂಕ ಮತ್ತಿತರ ಮಾನಸಿಕ ಸಮಸ್ಯೆಗಳು) ಮತ್ತು ಸಿದ್ಧಾಂತವು ಪರಿಗಣಿಸುವಂತೆ ನೇರವಾಗಿ ಅಳತೆ ಮಾಡಲಾಗಿಲ್ಲ. ಇಲ್ಲಿ ಆಸಕ್ತಿಯ ಫಲಿತಾಂಶವೆಂದರೆ ಮಕ್ಕಳು ಈಗಿನ ಸಮಸ್ಯಾ ವರ್ತನೆಯು ಮಕ್ಕಳ ಮನೋಭಾವಗಳಿಂದ ಪ್ರಭಾವಿತಗೊಳ್ಳುತ್ತವೆ ಮತ್ತು ಸಾಕಿದ ತಂದೆ ತಾಯಿಯರ ಮಾನಸಿಕ ರೋಗ ಲಕ್ಷಣದ ಮಟ್ಟವನ್ನು ಅವಲಂಬಿಸಿರುತ್ತದೆ.

ರಿಗ್ಗಿನ್ಸ್–ಕಾಸ್ಪರ್ಸ್ ಮತ್ತಿತರರು (2003) ತಮ್ಮ ಚರ್ಚೆಯಲ್ಲಿ ಮತ್ತು ತೀರ್ಮಾನಗಳಲ್ಲಿ ಎಲ್ಲವನ್ನು ಜೈವಿಕ ಪರಿಸರವಾದೀ ಮಸೂರದಿಂದ ನೋಡಿದ್ದಾರೆನ್ನಿಸುತ್ತದೆ, ತಮ್ಮ ಅಧ್ಯಯನದ ಮಿತಿಗಳನ್ನು ಸೈದ್ಧಾಂತಿಕವಾಗಿ ಸೂಕ್ತವಾದ ರೀತಿಯಲ್ಲಿ ಯೋಚಿಸಿದ್ದಾರೆ ( ಅದರಲ್ಲೂ ಅವರ ಸಮಯದ ಕಲ್ಪನೆಯು ಹಿಂದಾಗಿದ್ದಂತೆ ಇದೆಯೇ ಹೊರತು ಮುಂದೆ ಅಗಬಹುದಾದ ಕಾಲಮಿತಿಯಲ್ಲಿಲ್ಲ) ಮತ್ತು ಮುಂದಿನ ಸಂಶೋಧನೆಗಳಿಗೆ

ಸೈದ್ಧಾಂತಿಕ ಹಾಗೂ ಪ್ರಯೋಗ ಶೀಲ ರೀತಿಯಲ್ಲಿ ತೋರು ಬೆರಳನ್ನು ನೀಡಿದ್ದಾರೆ. ಸಂದರ್ಭದ ಚರಾಂಶವನ್ನು ಅದರ ರೀತಿಯನ್ನು ನಿರ್ಣಯಿಸುವುದಲ್ಲದೆ, ಈ ಸಂಶೋಧನೆಯು ಪಿಪಿಸಿಟಿ ಮಾದರಿಯ ಒಂದು ಒಳ್ಳೆಯ ಪ್ರಯೋಗ ವಾದೀ ಉದಾಹರಣೆಯೆನ್ನಿಸುತ್ತದೆ.

ಕೊನೆಯ ಎರಡು ಪ್ರಬಂಧಗಳು ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತದ ಪರಿಪಕ್ವ ರೀತಿಯನ್ನು ಚೆನ್ನಾಗಿ ವಿವರಿಸಿ ಉಪಯೋಗಿಸಿದ್ದಾರೆ, ಅವರು ಸಮಯವನ್ನು ಪಿಪಿಸಿಟಿ ಮಾದರಿಯಲ್ಲಿ ಉಪಯೋಗಿಸಿಕೊಂಡಿದ್ದಾರೆ. ಆ ಪ್ರಬಂಧಗಳು ಕ್ಯಾಂಪ್ ಬೆಲ್ ಮತ್ತಿತರರು (2002) ಮತ್ತು ಟಡ್ಜ್ ಮತ್ತವರ ಸಹೋದ್ಯೋಗಿಗಳು(2003). ಕ್ಯಾಂಪ್ ಬೆಲ್ ಮತ್ತು ಆಕೆಯ ಸಹೋದ್ಯೋಗಿಗಳು ತಮ್ಮ ಅಧ್ಯಯನದಲ್ಲಿ ಬ್ರಾನ್‌ಫೆನ್‌ಬ್ರೆನ್ನರ್ (ಬ್ರಾನ್‌ಫೆನ್‌ಬ್ರೆನ್ನರ್ ಮತ್ತು ಮಾರ್ರಿಸ್ 1998) ಪರಿಸರವಾದೀ ಮಾದರಿಯನ್ನುಪಯೋಗಿಸಿಕೊಂಡು ವ್ಯಕ್ತಿಯ ಲಕ್ಷಣಗಳು, ಸಾಮೀಪ್ಯ ಪ್ರಕ್ರಿಯೆಗಳು, ಸಂದರ್ಭಗಳು ಮತ್ತು ಸಮಯಗಳ ಅಂತರ್ ಕ್ರಿಯೆಯನ್ನು ಗಮನಿಸಿ, ಅವುಗಳು ಒಟ್ಟಾಗಿ ಯಾವರೀತಿ ಬೆಳವಣಿಗೆಯ ಫಲಿತಗಳನ್ನು ಕೊಡುತ್ತದೆಂದು ಗುರುತಿಸಿದ್ದಾರೆ. (ಪುಟ 278) ಸಾಮೀಪ್ಯ ಪ್ರಕ್ರಿಯೆಗಳ ಅಳತೆಗೋಲಾಗಿ ಸಂಶೋಧಕರು ಹೋಮ್ ದರ್ಜಾ ಮಾಪನಿ ಉಪಯೋಗಿಸಿ ಕುಟುಂಬದ ಮುನ್ನಡೆಯುವಿಕೆಯ ದರ್ಜೆಯನ್ನು ಮಕ್ಕಳು ಅತಿ ಚಿಕ್ಕವರಾಗಿದ್ದಾಗ ಪತ್ತೆ ಮಾಡಿದರು. ಚಿಕ್ಕ ಮಕ್ಕಳ ಸಾಧನೆಯ ಅಂಕಗಳನ್ನು ವ್ಯಕ್ತಿಯ ಲಕ್ಷಣಗಳನ್ನಳೆಯಲು ಮುಖ್ಯವಾಗಿ ಉಪಯೋಗಿಸಿದರು. ಎಲ್ಲಾ ಮಕ್ಕಳು ಅಮೆರಿಕೆಯ ಆಫ್ರಿಕನ್ ಕುಟುಂಬದವರಾಗಿದ್ದು ಕೆಳ ಆರ್ಥಿಕ ಮಟ್ಟದವರಾಗಿದ್ದರು, ಅದರ ಅರ್ಥವೆಂದರೆ ಸಾಮೀಪ್ಯ ಪ್ರಕ್ರಿಯಗಳು ಯಾವ ರೀತಿ ಬದಲಾಗುತ್ತವೆಂದು ಎರಡು ದೊಡ್ಡ ವ್ಯವಸ್ಥೆಗಳಲ್ಲಿ ವ್ಯತ್ಯಾಸವಾಗುತ್ತವೆಂದು (ಬ್ರಾನ್‌ಫೆನ್‌ಬ್ರೆನ್ನರ್ 1993 ನೋಡಿ) ಅಧ್ಯಯನವು ಬಹಳ ಕಾಲದಾದ್ದರಿಂದ ಪ್ರಕ್ರಿಯೆ ವ್ಯಕ್ತಿ ಮತ್ತು ಸಂದರ್ಭಗಳು ಪರಸ್ಪರ ಪ್ರಭಾವ ಬೀರುತ್ತವೆಂದು ಪರೀಕ್ಷಿಸಿದರು. ಕ್ಯಾಂಪ್ ಬೆಲ್ ಮತ್ತವರ ಸಹೋದ್ಯೋಗಿಗಳು ತಮ್ಮ ಪ್ರಬಂಧದ ತೀರ್ಮಾನದಲ್ಲಿ ಮಾದರಿಯು ಬೆಳೆಯುವ ಹದಿಹರೆಯದವರ ಸ್ವ–ಸಾಮರ್ಥ್ಯದ ಬಗ್ಗೆ ತಿಳಿಯಲು ಸಹಾಯ ಮಾಡಲು ಅಳೆಯಲು ಅನುಕೂಲ ಮಾಡಿಕೊಡುತ್ತದೆಂದು ತಿಳಿಸಿದರು.

ಟಡ್ಜ್ ಮತ್ತವರ ಸಹೋದ್ಯೋಗಿಗಳು ನಡೆಸಿದ ಸಂಶೋಧನೆಯಲ್ಲಿ (2003) ಸಾಮೀಪ್ಯ ಪ್ರಕ್ರಿಯೆಗಳನ್ನು ಮಕ್ಕಳು ಅವರ ವಸ್ತುಗಳು, ಸಾಮಾನುಗಳು ಮತ್ತು ಜನಗಳು ತಮ್ಮ ದಿನನಿತ್ಯದ ಸೂಕ್ಷ್ಮ ವ್ಯವಸ್ಥೆಗಳಾದ ಕುಟುಂಬ ಮತ್ತು ಮಕ್ಕಳನ್ನು ನೋಡಿಕೊಳ್ಳುವ ರೀತಿಗಳೊಡನೆ ನಡೆಸುವ ಅಂತರ್ ಕ್ರಿಯೆಗಳನ್ನು ವೀಕ್ಷಿಸುವುದರ ಮೂಲಕ ಅಳೆಯಲಾಯ್ತು. ಇದನ್ನು ಪ್ರತಿಯೊಂದು ಮಗುವನ್ನು ಒಟ್ಟು 20 ಗಂಟೆಗಳ ಕಾಲ ವೀಕ್ಷಣೆ ನಡೆಸುವುದರಿಂದ ಸಾಧಿಸಲಾಯ್ತು ವ್ಯಕ್ತಿ ಲಕ್ಷಣಗಳನ್ನು ಅದರಲ್ಲೂ ಬೆಳವಣಿಗೆಯಲ್ಲಿ

ಚಿತಾವಣೆ ಮಾಡುವ ಲಕ್ಷಣಗಳನ್ನು ತಂದೆ ತಾಯಿಯರಲ್ಲಿ ಮತ್ತು ಮಕ್ಕಳಲ್ಲಿ, ಅಳೆಯಲಾಯ್ತು. ಉದಾಹರಣೆಗೆ ಲೇಖಕರು ತಂದೆ ತಾಯಿಯರು ಮಕ್ಕಳಲ್ಲಿ ಬೆಳೆಸುವ ಬಗೆಬಗೆಯ ನಂಬಿಕೆಗಳು ಮತ್ತು ಮಕ್ಕಳು ಚಟುವಟಿಕೆಗಳನ್ನು ಆರಿಸಿಕೊಳ್ಳುವುದು ಮತ್ತು ಅದೇ ಚಟುವಟಿಕೆಗಳಲ್ಲಿ ಮುಂದುವರೆಯುವುದರ ಬಗೆಗೆ ಇರುವ ಪ್ರೇರಣೆಯನ್ನು ಅಳೆದರು. ಸಂದರ್ಭಕ್ಕೆ ಸಂಬಂಧಿಸಿದಂತೆ, ಎರಡು ದೊಡ್ಡ ವ್ಯವಸ್ಥೆಗಳನ್ನು ಅಳೆಯಲಾಯ್ತು ಮಧ್ಯಮ ವರ್ಗದ ಮತ್ತು ಶ್ರಮಿಕ ವರ್ಗದ ಕುಟುಂಬಗಳನ್ನು ಅಮೆರಿಕೆಯ ದಕ್ಷಿಣ ಪೂರ್ವಭಾಗದಲ್ಲಿನ ಒಂದು ನಗರವನ್ನು ಪರಿಗಣಿಸಿದದರು. ಕೊನೆಯದಾಗಿ ಸಮಯವನ್ನು ಅಧ್ಯಯನದಲ್ಲಿ ಸೇರಿಸಿ ಮಕ್ಕಳನ್ನು ಮೂರು ಕಾಲಗಳಲ್ಲಿ ಅಳೆಯಲಾಯ್ತು ಮೂರು ವರ್ಷದ ಮಕ್ಕಳ ದಿನ ನಿತ್ಯದ ಚಟುವಟಿಕೆಗಳು ಮತ್ತು ಅಂತರ್ ಕ್ರಿಯೆಗಳನ್ನು ಅಳೆಯಲಾಯ್ತು ಮತ್ತು ಮಕ್ಕಳ ಒಂದು ಮತ್ತು ಎರಡನೆಯ ತರಗತಿಗಳ ಶಾಲಾ ಕಲಿಕೆಯ ಮಟ್ಟವನ್ನು ಶಿಕ್ಷಕರ ಕಾಣ್ಕೆಯ ಮೂಲಕ ಅಳೆಯಲಾಯ್ತು. ಈ ಅಧ್ಯಯನವು ನಮ್ಮ ಪ್ರಕಾರ, ಬ್ರಾನ್‌ಫೆನ್‌ಬ್ರೆನ್ನರ್ ಸಿದ್ಧಾಂತ ವನ್ನು ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಲಾಗಿದೆಯೆಂದು, ಒಳ್ಳೆಯ ಕೆಲಸವೆಂದು ಅನಿಸಿಕೆ.